CC-O. In Public Domain. Digitized by eGangotri

ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಆಯ್ಯಂಗಾರ್ ಸ್ಮಾರಕ ಪುಸ್ತಕಮಾಲೆ–೧

ಶ್ರೀ ಕುಲಶೇಖರ ಆಳ್ವಾರ್ ಕರುಣಿಸಿದ

ಮುಕುಂದಮಾಲಾ

ಎಂಬ

ಸ್ತೋತ್ರಮುಕ್ತಾಮಂಜರಿ
ಮತ್ತು ಅದರ ಜ್ಞಾಪಕರೂಪ

ಸಂಪಾದಕ :
ಜಿ. ಪಿ. ರಾಜರತ್ನಂ

ಶಾಕ್ಯ ಸಾಹಿತ್ಯ ಮಂಟಪ
(ಡಾ॥ ಜಿ. ಪಿ. ರಾಜರತ್ನಂ ಸ್ಮಾರಕ)
14/3, 17ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು - 560 055

Sri Vidyabharathi Book Centre, Sringeri

ಬೆಲೆ : ರೂ. 8.00

CC-O. In Public Domain. Digitized by eGangotri

ತೀರ್ಥಸ್ವರೂಪರಾದ

ಡಾಕ್ಟರ್ ಮೇಲುಕೋಟೆ ಕೃಷ್ಣಯ್ಯಂಗಾರ್

(ಡಿ. ಸುಬ್ಬಯ್ಯ ರಸ್ತೆ, ಮೈಸೂರು)

[1889–1971]

ಅವರ ನೆನಪಿಗಾಗಿ

ಈ ಸ್ತೋತ್ರಮುಕ್ತಾಮಂಜರಿಯ ಐದನೆಯ ಮುದ್ರಣವನ್ನು

ಅವರ ಹಿರಿಯ ಮಗಳು

ಮಾತೃಶ್ರೀ ಕಡಾಂಬಿ ಪಾರ್ಥಸಾರಥಿ ಜಯಲಕ್ಷ್ಮಿ

ಅವರು ಅಚ್ಚುಮಾಡಿಸಿಕೊಟ್ಟಿದ್ದಾರೆ.

ಭಗವಂತನು ಇವರ ಮನೆಮಕ್ಕಳೆಲ್ಲರಿಗೂ

ಸಕಲ ಸನ್ಮಂಗಳವನ್ನೂ ಉಂಟುಮಾಡಲಿ.

11–2–1992

ಶ್ರೀಧರ ರಾಜರತ್ನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಆಯ್ಯಂಗಾರ್ ಸ್ಮಾರಕ ಪುಸ್ತಕಮಾಲೆ–೧

ಶ್ರೀ ಕುಲಶೇಖರ ಆಳ್ವಾರ್ ಕರುಣಿಸಿದ

ಮುಕುಂದಮಾಲಾ

ಎಂಬ

ಸ್ತೋತ್ರಮುಕ್ತಾಮಂಜರಿ
ಮತ್ತು ಅದರ ಜ್ಞಾಪಕರೂಪ

ಸಂಪಾದಕ :
ಜಿ. ಪಿ. ರಾಜರತ್ನಂ

ಶಾಕ್ಯ ಸಾಹಿತ್ಯ ಮಂಟಪ
(ಡಾ॥ ಜಿ. ಪಿ. ರಾಜರತ್ನಂ ಸ್ಮಾರಕ)
14/3, 17ನೇ ಅಡ್ಡರಸ್ತೆ
ಮಲ್ಲೇಶ್ವರಂ, ಬೆಂಗಳೂರು - 560 055

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲನೆಯ ಮುದ್ರಣ : ೬-೧೨-೧೯೫೫
ಎರಡನೆಯ ಮುದ್ರಣ : ೧-೯-೧೯೬೭
ಮೂರನೆಯ ಮುದ್ರಣ : ೨೩-೧-೧೯೭೨
ನಾಲ್ಕನೆಯ ಮುದ್ರಣ : ೧೪-೧೧-೧೯೪೪
ಐದನೆಯ ಮುದ್ರಣ : ೧೧-೨-೧೯೯೨

(ಈ ಪುಸ್ತಕದ ಎಲ್ಲಾ ಹಕ್ಕುಗಳೂ ಶ್ರೀಧರ ರಾಜರತ್ನಂ ಅವರದಾಗಿದೆ)

ಓಂ ನಮೋ ನಾರಾಯಣಾಯ
ಓಂ ನಮೋ ಭಗವತೇ ವಾಸುದೇವಾಯ

ಯಾರ ಪಾಲಿಗೂ ತಾವು ಮುಳ್ಳಾಗದೆ
ಹತ್ತಿರ ಬಂದವರಿಗೆಲ್ಲ ಹೂವಾಗಿ ಹಣ್ಣಾಗಿ
ಬದುಕಿ ಬಾಳಿ ಹೋದ

ತೀರ್ಥಸ್ವರೂಪ
ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಅಯ್ಯಂಗಾರ್

ಅವರ ನೆನಪಿನ ನಂದಾದೀವಿಗೆಗೆ
ಮೊದಲನೆಯ ನಾಲಗೆಯಾಗಿ
ಈ 'ಮುಕುಂದಮಾಲಾ' ಪ್ರಕಟವಾಯಿತು.

ಶ್ರೀ ಕೃಷ್ಣಾರ್ಪಣಮಸ್ತು

ಮುದ್ರಕರು :
ಬಿ. ಬಿ. ಡಿ. ಪವರ್ ಪ್ರೆಸ್, ಅರಳೇಪೇಟೆ, ಬೆಂಗಳೂರು 560 053

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮಾತು

ಬೆಂಗಳೂರಿನ ಮಲ್ಲೇಶ್ವರದ ಗಣ್ಯವ್ಯಕ್ತಿಗಳಲ್ಲಿ ಒಬ್ಬರಾದ **ತೀರ್ಥ ಸ್ವರೂಪ ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಅಯ್ಯಂಗಾರ್ಯರು** ಕಳೆದ ಏಕಾದಶಿ ಶುಕ್ರವಾರ (25-11-1955) ರಾತ್ರಿ, ತಮ್ಮ ಎಂಬತ್ತನೆಯ ವಯಸ್ಸಿನಲ್ಲಿ ಶ್ರೀಮನ್ನಾರಾಯಣನ ತಿರುವಡಿಗಳನ್ನು ಸೇರಿ ಕೃತಕೃತ್ಯರಾದರು.

ಭಗವದ್ಭಕ್ತರಾದ ಇವರಿಗೆ ಪ್ರತಿದಿನದ ಬೆಳಗು **'ಮುಕುಂದಮಾಲಾ'** ಸ್ತೋತ್ರದ ಮಂಜುಳವರ್ಣಗಳಿಂದ ಆರಂಭವಾಗುತ್ತಿತ್ತು. ಈ ಸ್ತೋತ್ರ ಮುಕ್ತಾಮಂಜರಿಯ ಪ್ರತಿಯೊಂದು ಅಕ್ಷರದ ಮಾಧುರ್ಯವನ್ನೂ ನಾಲಗೆ ತಾನು ಸವಿಯುವಷ್ಟೂ ಸವಿದು, ತನ್ಮೂಲಕವಾಗಿ ಆಯಂದಿನ ನಿತ್ಯಕರ್ಮಗಳಿಗೆ ಅವರ ಜೈತನ್ಯವು ಜಾಗೃತವಾಗುತ್ತಿತ್ತು.

ಸಂಸಾರವೊಂದಿಗರಾಗಿ, ತಮ್ಮ ಆಶ್ರಿತವರ್ಗದ ಯೋಗಕ್ಷೇಮವನ್ನು ನಿರ್ವಹಿಸುವುದಕ್ಕೋಸ್ಕರ ನಡಸುತ್ತಿದ್ದ ಲೌಕಿಕ ವ್ಯವಹಾರ ಕಾರ್ಯಗಳ ಜೊತೆಗೆ ತಮ್ಮ ಆತ್ಮದ ಕ್ಷೇಮಲಾಭವನ್ನು ಸಂಪಾದಿಸಿಕೊಡುವ ಭಗವದ್ಧ್ಯಾನ ವಿಷಯಕವಾದ ಪಾರಲೌಕಿಕ ಕರ್ಮಗಳಿಗಾಗಿಯೂ ಅವರ ಕಾಲದ ಬಹು ಭಾಗ ಸದ್ವಿನಿಯೋಗವಾಗುತ್ತಿತ್ತು. "ಸಂಸಾರಭರಣದೊಳೆ ಸಂನ್ಯಸನ ನಯ" ವನ್ನು ಅನುಷ್ಠಾನಮಾಡಬೇಕೆಂಬ ಆದರ್ಶಕ್ಕೆ ಅವರು ಉತ್ತಮ ಉದಾಹರಣೆ ಯಾಗಿ ಇದ್ದರು.

ಕಣ್ಣುಗಳಿರಡನ್ನೂ ಕಳೆದುಕೊಂಡು ಹತ್ತು ವರ್ಷಗಳ ಕಾಲ ಸಾರ್ಥಕ ವಾಗಿ ಬದುಕು ನಡೆಸಿದ ಅವರ ಬಾಯಲ್ಲಿ ಒಮ್ಮೆಯಾದರೂ ತಮ್ಮ ನಷ್ಟದ ಬಗ್ಗೆ ತಮಗೇ ಮರುಕವಾಗಲಿ, ಅದೃಷ್ಟದ ಮೇಲೆ ಆಕ್ಷೇಪವಾಗಲಿ ಒಂದು ಸುದ್ದಿ ಸೊಲ್ಲು ಬಂದದ್ದಿಲ್ಲ. 'ಯದ್ಯದ್ ಭವ್ಯಂ ಭವತು ಭಗವನ್ ಪೂರ್ವ ಕರ್ಮಾನುರೂಪಂ' ಎಂದು ಈಶ್ವರೇಚ್ಛೆಗೆ ವಿಧೇಯವಾಗಿ ನಡೆದುಕೊಂಡರು.

"ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ"

ಎಂಬ ಅಭಯದ ಡಂಗುರವನ್ನು ಸಾರಿದ ಶ್ರೀಕೃಷ್ಣನ ಗೀತಾ ಗ್ರಂಥರಾಜ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ಕರಾವಲಂಬನವನ್ನಾಗಿ ಕೈಕೊಂಡು, ಭಗವಂತನಲ್ಲಿ ನ್ಯಸ್ತಭರರಾಗಿ, ಪ್ರಪತ್ತಿಮಾರ್ಗದಲ್ಲಿ ನಿಶ್ಚಿಂತೆಯಿಂದ ನಡೆದು ಬದುಕಿದರು. ಮಕ್ಕಳ, ಮೊಮ್ಮಕ್ಕಳ, ಇತರರ ಕಣ್ಣು ಬಾಯಿಗಳನ್ನೇ ತಮಗೆ ನೂರು ಕಣ್ಣು ಮಾಡಿಕೊಂಡು, ಗೀತೆಯ ಬೇರೆ ಬೇರೆ ಭಾಗಗಳನ್ನು, ಹಗಲಿನ ಬೇರೆ ಬೇರೆ ಹೊತ್ತುಗಳಲ್ಲಿ ಎಷ್ಟೆಷ್ಟು ಓದಿಸಿ, ಕಿವಿಗೊಟ್ಟು ಕೇಳಿ, ಜೊತೆಗೆ ತಾವೂ ಮನಃಪೂರ್ತಿಯಾಗಿ ಹೇಳಿದರೂ ಅವರಿಗೆ ಸಾಲದು. ಗೀತೆಯ ಬಗ್ಗೆ ಅವರಿಗೆ 'ಹುಚ್ಚು' ಹಿಡಿದುಹೋಗಿತ್ತು ಎಂದರೂ ತಪ್ಪಾಗಲಾರದು. ಅವರಿಗೆ ಇಂತಹ ಹುಚ್ಚು ಹಿಡಿದದ್ದರಿಂದಲೇ ಅವರು ತಮ್ಮವರ ಪಾಲಿಗೆ ಇಷ್ಟು ವರ್ಷಗಳು ಅಶ್ವತ್ಥದ ಹಾಗೆ ಭದ್ರವಾಗಿ ಇದ್ದು ಎಲ್ಲರನ್ನೂ ಮುಂದೆ ತಂದರು.

ದೇಹವಿಸರ್ಜನೆ ಆಗುವುದಕ್ಕೆ ಮೂರು ದಿವಸಗಳ ಮುಂಚೆ, ಬಾಹ್ಯ ಪ್ರಪಂಚ ಜ್ಞಾನವು ವಿಮುಖವಾಗುವುದಕ್ಕೆ ಮೊದಲು, ಒಂದು ದಿನವೆಲ್ಲಾ ಭಗವದ್ಗೀತೆಯ ಎರಡನೆಯ ಅಧ್ಯಾಯದ ಸ್ಥಿತಪ್ರಜ್ಞನ ಲಕ್ಷಣಗಳನ್ನೊಳಗೊಂಡ ಶ್ಲೋಕಗಳ ಪಾದಗಳನ್ನು ಅಲ್ಲೊಂದು ಇಲ್ಲೊಂದು ಮತ್ತೆ ಮತ್ತೆ ಕನವರಿಸಿಕೊಳ್ಳುತ್ತಿದ್ದರು. 'ನಾಭಿನಂದತಿ ನ ದ್ವೇಷ್ಟಿ . . . ನಾಭಿನಂದತಿ ನ ದ್ವೇಷ್ಟಿ' ಎಂದು ಮತ್ತೆ ಮತ್ತೆ ಹೇಳುವರು; ಹೇಳಿಯಾದ ಮೇಲೆ 'ಸರಿ' ಎಂದು ಅದನ್ನು ಮುಗಿಸಿ ಬಿಟ್ಟ ಹಾಗೆ ಮತ್ತೆ ಯಾವುದಾದರೂ ಒಂದು ಪಾದವನ್ನು ಸ್ಮರಿಸಿಕೊಳ್ಳುವರು, ಹೇಳಿದ್ದನ್ನೆ ಮತ್ತೆ ಹೇಳುವರು. ಹೀಗೆ ಒಂದು ದಿನವೆಲ್ಲಾ ಗೀತೆಯ ಅಷ್ಟಾಕ್ಷರಗಳು ಹೊರತಾಗಿ ಬೇರೊಂದು ಮಾತಿಲ್ಲ. ಈ ಮೋಹನ ಮಾಲೆಯಲ್ಲಿ ಕಟ್ಟಕಡೆಯದಾಗಿ ಅವರ ಮುಖದಿಂದ ಬಂದುದೆಂದರೆ: "ವೀತರಾಗಭಯಕ್ರೋಧಃ". "ಆಹಾರ ತೆಗೆದುಕೊಳ್ಳಬೇಕು, ಬಾಯಿ ತೆರೆಯಿರಿ"—ಎಂದು ಕೇಳಿಕೊಂಡಾಗ, "ಆಂ? ವೀತರಾಗಭಯಕ್ರೋಧಃ . . . ಪಣ್ಣೇನಾ? ಸರಿ!" (ಎಂದರೆ, ರಾಗ ಭಯ ಕ್ರೋಧಗಳನ್ನು ಬಿಟ್ಟವನು . . . ನಾನು ಮಾಡಿದೆನಾ? ಸರಿ!) ಎಂದರು. ಅದೇ ಕೊನೆಯ ಮಾತಾಯಿತು, ಆಮೇಲೆ ಮಾತು ನಿಂತುಹೋಯಿತು. ಮೈಯ ಮೇಲಿನ ಎಚ್ಚರ ಮುಗಿಯಿತು, ಉಸಿರು ಮಾತ್ರ ಆಡುತ್ತಿತ್ತು.

ಮೂರು ದಿನಗಳನಂತರ, ಏಕಾದಶಿಯ ರಾತ್ರಿ, ಅವರ ಜೀವ ಶ್ರೀಮನ್ನಾರಾಯಣನ ತಿರುವಡಿಗಳಲ್ಲಿ ಹೋಗಿ ಸೇರಿಕೊಂಡಿತ್ತು.

CC-O. Mumukshu Bhawan Varanasi Collection. Digitized by eGangotri
Sri Vidyabharathi Book Centre, Sringeri

CC-O. In Public Domain. Digitized by eGangotri

§

ಹತ್ತು ವರ್ಷಗಳ ಕಾಲ ಈ ಹಿರಿಯ ಬೆಳಕಿನ ಹೊಸ್ತಿಲಿನ ಪಕ್ಕದಲ್ಲೆ ಹಗಲೂ ರಾತ್ರಿ ಇದ್ದು, ನಾನು ಬಹುಮಟ್ಟಿಗೆ ನನ್ನ ಅಂತರಂಗದ ಕತ್ತಲೆಯನ್ನು ಕಳೆದುಕೊಂಡಿರುವುದಾಗಿದೆ. ಗಡಿಗೆಯೊಳಗಿನ ಬೆಳಕು, ಗಡಿಗೆಯೊಡೆದುಹೋದರೆ, ನಿರ್ಬಾಧಿತವಾಗಿ ಬೆಳಗುವಂತೆ ಈಗ ಇರುವ ಅವರ ಬೆಳಕನ್ನು ಅವಿರತವಾಗಿ, ಇನ್ನೂ ಸ್ಪಷ್ಟವಾಗಿ ಕಾಣುವಂತಹ ಕಣ್ಣು ನನಗೆ ಬೆಳೆಯಲಿ ಎಂದು, ಅವರು ನಂಬಿದ್ದ ಕೃಷ್ಣನನ್ನೆ ನಾನು ಬೇಡಿಕೊಳ್ಳುತ್ತೇನೆ. ಈ ಬೇಡಿಕೆಯ ಸಾಕಾರರೂಪವೇ ಈ ಸ್ಮಾರಕಪುಸ್ತಕಮಾಲೆ.

ಅಕ್ಷರದ ಶಕ್ತಿಯಲ್ಲಿ ನನಗೆ ಅಪಾರವಾದ ಶ್ರದ್ಧಾವಿಶ್ವಾಸಗಳುಂಟು. ಮನಸ್ಸನ್ನು ಶುದ್ಧಗೊಳಿಸಿಕೊಂಡರೆ, ಅದರ ಕೆಳಗಿನದೂ ಅದರ ಮೇಲಿನದೂ ತನ್ನಷ್ಟಕ್ಕೆ ತಾನೇ ಶುದ್ಧವಾಗುತ್ತದೆ—ಎಂದ ಬುದ್ಧಗುರುವಿನ ಮಾತಿನಲ್ಲಿ ನನಗೆ ತುಂಬು ನಂಬಿಕೆ. ಅದರಿಂದ, ಶ್ರೀ ಲಕ್ಷ್ಮೀನರಸಿಂಹ ಅಯ್ಯಂಗಾರ್ಯರು ಯಾವ ಸದ್ಭಾವನೆಯ ಬಲದಿಂದ ತಾವು ಆತ್ಮಬಲಿಯಾಗಿ ಬದುಕಿದರೋ, ಅದೇ ಭಾವನೆಗೆ ನಾನೂ ನನ್ನ ಮಟ್ಟಿಗೆ ಶರಣನಾಗಿರುವ ಕಾರಣದಿಂದ—ಯಾವ 'ಮುಕುಂದಮಾಲಾ' ಸ್ತೋತ್ರವು ಅವರಿಗೆ ಎಡೆಬಿಡದೆ ಪ್ರಾತಃಸ್ಮರಣೀಯವಾಗಿದ್ದಿತೋ ಅದೇ 'ಮುಕುಂದಮಾಲಾ' ಸ್ತೋತ್ರವು, ಕನ್ನಡ ಅನುವಾದಸಹಿತವಾಗಿ, ಅವರ ಹೆಸರಿನ ಸ್ಮಾರಕ ಪುಸ್ತಕಮಾಲೆಯ ಮೊದಲನೆಯ ಪುಸ್ತಕವಾಗಿ ಪ್ರಕಟವಾಗಿದೆ. ಈಶ್ವರಕೃಪೆ ಒದಗಿದರೆ, ಇದೇ ರೀತಿಯ ಸುಲಭ ಪುಸ್ತಕಗಳು ಕಾಲಕಾಲಕ್ಕೆ ಈ ಮಾಲೆಗೆ ಸೇರುತ್ತಾ ಹೋಗುವುವು.

§

ಸಮಸ್ತ ಭಾರತಕ್ಕೆ ತ್ರಾಣದಾಯಿಯಾದ ಸಂಸ್ಕೃತವಾಙ್ಮಯದಲ್ಲಿ ಸ್ತೋತ್ರಸಾಹಿತ್ಯದ ವಿಭಾಗವೊಂದೇ ಸಾಕು,—ಬೆಳ್ಳಿಯ ಬೆಟ್ಟದಂತೆ ವಿರಾಜಿಸುತ್ತಿದೆ. ಅನಾದಿಯೆನಿಸಿದ ವೇದಗಳಿಂದ ಹಿಡಿದು ಕಾವ್ಯಗಳೇ ಕೊನೆಯಾದ ಪ್ರತಿಯೊಂದು ಸಾಹಿತ್ಯಸಂಘಾತದಲ್ಲಿಯೂ ಸ್ತೋತ್ರಗಳು ಹೂವಿನೊಳಗಿನ ಮಕರಂದದಂತೆ ಮಿರುಮಿರುಗಿ ಸುಗಂಧವನ್ನು ಬೀರುತ್ತ ಭಕ್ತಭ್ರಮರಗಳನ್ನು ತಮ್ಮೆಡೆಗೆ ಕರೆಯುತ್ತಿವೆ. ಪರಮವನ್ನು ಕಾಣಲು ಇರುವ ಮಾರ್ಗಗಳೆಲ್ಲೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಅತ್ಯಂತ ಸುಲಭವೆನ್ನಿಸಿದ ಭಕ್ತಿಮಾರ್ಗದಲ್ಲಿ ಈ ಸ್ತೋತ್ರಗಳು ಸಾಲುಮರ ಗಳಂತೆ ನಿಂತು ನೆರಳು ಕೊಡುತ್ತಿವೆ.

ಸ್ತೋತ್ರಗಳ ಮೂಲಕವಾಗಿ ನಾವು ಭಗವಂತನನ್ನು ಪ್ರಾರ್ಥಿಸಿಕೊಳ್ಳ ಬೇಕಾದ ಅಗತ್ಯವನ್ನು ಕುರಿತು ಮಹಾತ್ಮ ಗಾಂಧೀಜಿ ಹೀಗೆ ಹೇಳಿದ್ದಾರೆ:

"ಮನುಷ್ಯನು ತಾನು ಹೀನಸ್ಥಿತಿಗೆ ಬಂದಾಗ, ತನ್ನನ್ನು ಉದ್ಧರಿಸ ಬೇಕೆಂದು ದೇವರನ್ನು ಪ್ರಾರ್ಥಿಸುತ್ತಾನೆ. 'ದಿಕ್ಕುಕೆಟ್ಟವರಿಗೆ ದೇವರೆ ಜೊತೆ' ಎಂದು ತಮಿಳು ಗಾದೆ ಹೇಳುತ್ತದೆ.

"ದೇವರನ್ನು ಕುರಿತು ನಾವು ಕೇಳಿಕೊಳ್ಳಬೇಕಾದ ಅವಶ್ಯಕತೆಯಾದರೂ ಏನು? ದೇವರಿಗೆ—ಅಂಥವನೊಬ್ಬನು ಇರುವುದಾದರೆ—ನಮಗೆ ಏನಾಗಿದೆ ಎಂಬುದು ತಾನಾಗಿಯೆ ತಿಳಿಯುವುದಿಲ್ಲವೇನು? ತನ್ನ ಕರ್ತವ್ಯವನ್ನು ತಾನು ನಡಸುವುದಕ್ಕೆ ಸಹಾಯವಾಗಿ ಆತನಿಗೂ ಪ್ರಾರ್ಥನೆಯ ಅಗತ್ಯ ಉಂಟೇನು?

"ದೇವರಿಗೆ ನಾವೇನೂ ನೆನಪು ಕೊಡಬೇಕಾದ ಅಗತ್ಯವಿಲ್ಲ. ಆತ ಎಲ್ಲರ ಒಳಗೂ ಇದ್ದಾನೆ. ಆತನ ಅನುಜ್ಞೆಯಿಲ್ಲದೆ ಏನೊಂದೂ ಆಗದು. ನಮ್ಮ ಪ್ರಾರ್ಥನೆ ಎಂಬುದು ನಮ್ಮ ಹೃದಯಶೋಧನೆ, ಆತನ ಅವಲಂಬನವಿಲ್ಲದೆ ನಾವು ನಿಸ್ಸಹಾಯರು ಎಂದು ನಮಗೆ ನಾವೇ ಕೊಟ್ಟುಕೊಳ್ಳುವ ನೆನಪು. ಪ್ರಾರ್ಥನೆಯಿಲ್ಲದೆ, ದೇವರ ಆಶೀರ್ವಾದ ಬೆನ್ನ ಹಿಂದೆ ಇದ್ದ ಹೊರತು, ಅತ್ಯುತ್ತಮವಾದ ಮನುಷ್ಯಪ್ರಯತ್ನ ಕೂಡ ವ್ಯರ್ಥ—ಎಂದು ಸ್ಪಷ್ಟವಾಗಿ ಗುರುತಿಸಿಕೊಳ್ಳದೆ ಮಾಡಿದ ಯಾವ ಪ್ರಯತ್ನವೂ ಪೂರ್ಣವಾಗದು. ಪ್ರಾರ್ಥನೆ ಎಂದರೆ—ನಾವು ವಿನೀತರಾಗಬೇಕೆಂಬ ಒಂದು ಆಂತರ್ಯದ ಕರೆ. ಪ್ರಾರ್ಥನೆ ಎಂಬುದು—ನಮ್ಮ ಆತ್ಮಶುದ್ಧಿಗೆ, ನಮ್ಮ ಅಂತರಂಗದ ಶೋಧನೆಗೆ ಒದಗುವ ಒಂದು ಕರೆ."

§

ಸಂಸ್ಕೃತದಲ್ಲಿ ಹೇಗೋ ಹಾಗೆಯೇ ಭಾರತದ ದೇಶಭಾಷೆಗಳಲ್ಲಿಯೂ ಅದೇ ಅಂತರಂಗವುಳ್ಳ ಸ್ವತಂತ್ರ ಸ್ತೋತ್ರಸಾಹಿತ್ಯ ಅಪಾರವಾಗಿ ಬೆಳೆದು ಬಂದಿದೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದವು ತಮಿಳುಭಾಷೆಯಲ್ಲಿವೆ. ಅವು ಯಾವುವೆಂದರೆ: ವಿಷ್ಣುವಿನ ಭಕ್ತರು ಉಸಿರಿದ **'ಪ್ರಬಂಧ'**ಗಳು, ಮತ್ತು ಶಿವನ ಭಕ್ತರು ಉಸಿರಿದ **'ತೇವಾರ'**ಗಳು, **'ತಿರುವಾಚಕ'**ಗಳು.

CC-O. Vidyabharathi Book Centre, Shringeri

CC-O. In Public Domain. Digitized by eGangotri

'ಪ್ರಬಂಧ'ಗಳನ್ನು ಉಸಿರಿದ ವೈಷ್ಣವಭಕ್ತರನ್ನು **'ಆಳ್ವಾರ್'** ಎಂದು ಕರೆಯುತ್ತಾರೆ. 'ಆಳ್ವಾರ್' ಎಂದರೆ ಭಗವದ್ಭಕ್ತಿಯಲ್ಲಿ ಆಳದವರು, ಮುಳುಗಿದವರು ಎಂದು ಅರ್ಥ. ಇಂತಹ 'ಆಳ್ವಾರ್'ಗಳು ಹನ್ನೆರಡು ಜನ: ಪೊಯ್‌ಗೈಯಾಳ್ವಾರ್, ಪೂತತ್ತಾಳ್ವಾರ್, ಪೇಯಾಳ್ವಾರ್, ತಿರುಮಳಿಶೈಯಾಳ್ವಾರ್, ಕುಲಶೇಖರಾಳ್ವಾರ್, ಪೆರಿಯಾಳ್ವಾರ್, ಆಂಡಾಳ್, ತೊಂಡರಡಿಪ್ಪೊಡಿಯಾಳ್ವಾರ್, ತಿರುಪ್ಪಾಣಾಳ್ವಾರ್, ತಿರುಮಂಗೈಯಾಳ್ವಾರ್, ನಮ್ಮಾಳ್ವಾರ್, ಮತ್ತು ಮಧುರಕವಿಯಾಳ್ವಾರ್.

ಈ ಹನ್ನೆರಡು ಆಳ್ವಾರ್‌ಗಳಲ್ಲಿ ಆಂಡಾಳ್ (ಆಳ್ವಾರ್ ಎಂಬುದರ ಸ್ತ್ರೀ ರೂಪ) ಎಂಬ ಗೋದಾದೇವಿ ಒಬ್ಬರು ಹೊರತಾಗಿ ಉಳಿದವರು ಗಂಡಸರು. ಈಕೆ ವಿಪ್ರವಂಶಜರಾದ ಪೆರಿಯಾಳ್ವಾರರ ಸಾಕುಮಗಳು; ದಶರಥನಿಗೆ ಸೀತಾದೇವಿ ಹೇಗೋ ಹಾಗೆ, ಅಯೋನಿಜೆ. ಇವರಂತೆಯೇ ಮೊದಲಿನ ಮೂವರು ಆಳ್ವಾರರು ಅಯೋನಿಜರು, ಪುಷ್ಪಗಳಲ್ಲಿ ಜನಿಸಿದವರು; ತಿರುಮಳಿಶೈಯವರ ಜಾತಿ ತಿಳಿಯದು; ಕುಲಶೇಖರರು ಕ್ಷತ್ರಿಯರು; ತಿರುಪ್ಪಾಣಿಗಳು ಅಂತ್ಯಜರು; ನಮ್ಮಾಳ್ವಾರರು ವೆಳ್ಳಾಳರು; ತಿರುಮಂಗೈ 'ಕಳ್ಳರ್' ಎಂಬ ಕುಲದವರು; ಇನ್ನುಳಿದವರು ಬ್ರಾಹ್ಮಣಜಾತಿಯ ಆಳ್ವಾರರು. ಈ ರೀತಿಯಾಗಿ ಈ ಆಳ್ವಾರುಗಳೆಲ್ಲರೂ ಆ ಜಾತಿ ಈ ಜಾತಿ ಎನ್ನದೆ, ಗಂಡಸು ಹೆಂಗಸು ಎನ್ನದೆ, ಪಂಡಿತ ಪಾಮರ ಎನ್ನದೆ—ಭಕ್ತಿಯು ಮುಕ್ತಿಗೆ ಸುಲಭವಾದ ದಾರಿ, ಈ ದಾರಿಯನ್ನು ಹಿಡಿಯಲು ಎಲ್ಲರಿಗೂ ಅಧಿಕಾರವುಂಟು ಎಂಬ ಭಾಗವತತತ್ತ್ವವನ್ನು ತಮ್ಮ ಬದುಕಿನ ನಡವಳಿಕೆಯ ಮೂಲಕ ಲೋಕಕ್ಕೆ ತೋರಿಸಿಕೊಟ್ಟರು.

ಈ ಆಳ್ವಾರ್‌ಗಳು ಯಾವಾಗ ಇದ್ದರು ಎಂಬ ಬಗ್ಗೆ ಎರಡು ಮತಗಳಿವೆ. ಸಂಪ್ರದಾಯದವರು ಕ್ರಿ. ಪೂ. ಮೂರು ನಾಲ್ಕು ಸಾವಿರ ವರ್ಷಗಳ ಹಿಂದೆ ಇವರು ಇದ್ದರೆಂದು ನಂಬುತ್ತಾರೆ. ಐತಿಹಾಸಿಕ ಸಂಶೋಧಕರು ಕ್ರಿ. ಶ. ಏಳನೆಯ ಶತಮಾನಕ್ಕೂ ಒಂಬತ್ತನೆಯ ಶತಮಾನಕ್ಕೂ ನಡುವೆ ಇವರುಗಳು ಇದ್ದರೆಂದು ಅಭಿಪ್ರಾಯಪಡುತ್ತಾರೆ. ಸಂಜೀವನೌಷಧವು ಪ್ರಾಚೀನವಾದರೇನು? ಅರ್ವಾಚೀನವಾದರೇನು? ಅದರ ಸಂಜೀವನ ಗುಣವೇ ನಮಗೆ ಮೊದಲು ಸಂಬಂಧಪಟ್ಟದ್ದು! ಆಳ್ವಾರುಗಳ ಪ್ರಬಂಧಗಳಲ್ಲಿ ಈ ಗುಣವನ್ನು ಯಥೇಷ್ಟವಾಗಿ ಕಂಡು ಉಂಡಿದ್ದಾರೆ ಅನುಭಾವಿಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

§

ಆಳ್ವಾರ್‌ಗಳು ಭಗವಂತನ ಸಾಕ್ಷಾತ್ಕಾರಕ್ಕೆ ತಾವು ಹಿಡಿದ ದಾರಿ— ಭಕ್ತಿಯ ದಾರಿ. ಬುದ್ಧಿಗೆ ಸಂಬಂಧಪಟ್ಟ ಜ್ಞಾನಕ್ಕಿಂತ ಹೃದಯಕ್ಕೆ ಸಂಬಂಧ ಪಟ್ಟ ಭಕ್ತಿಗೆ ಅವರು ಮೊದಲ ಸ್ಥಾನವನ್ನು ಕೊಟ್ಟರು. ಅದಕ್ಕಿಂತ ಇದು ಸುಲಭ ಎಂಬುದನ್ನು ತಮ್ಮ ಬದುಕಿನಿಂದ ತೋರಿಸಿದರು.

ಅವರ ಉಪದೇಶವನ್ನು ಹೀಗೆ ಸಂಗ್ರಹಿಸಬಹುದು :

ಮನುಷ್ಯನಿಗೆ ಮೊತ್ತಮೊದಲನೆಯ ಕರ್ತವ್ಯವೆಂದರೆ— ತನ್ನ ಆತ್ಮವನ್ನು ಭಗವಂತನಿಗೆ ಅರ್ಪಣೆಮಾಡಿಕೊಳ್ಳುವುದು ; ಭಗವಂತನೊಬ್ಬನನ್ನೇ ಉಪಾಸನೆ ಮಾಡಿ ಆತನ ಪರಿಚರ್ಯೆ ಮಾಡುವುದು ; ಭಗವಂತನಲ್ಲದೆ ಬೇರೆ ಯಾವುದ ರಲ್ಲಿಯೂ ಭಕ್ತಿ ಇಡದಿರುವುದು ; ಭಗವಂತನನ್ನು ನಾರಾಯಣನೆಂಬ ನಾಮ ರೂಪಗಳಿಂದ ಉಪಾಸಿಸುವುದು.

ನಾರಾಯಣನಿಂದ ಬಂದುದು ಈ ಜಗತ್ತು, ನಾರಾಯಣನಲ್ಲಿ ನಿಂತಿರು ವುದು ಈ ಜಗತ್ತು, ಕಡೆಗೆ ನಾರಾಯಣನೊಳಗೆ ಹೋಗುವುದು ಈ ಜಗತ್ತು. ನಾರಾಯಣನು ಜಗತ್ತಿನ ಒಳಗೂ ಹೊರಗೂ ವ್ಯಾಪಿಸಿಕೊಂಡು, ಇದನ್ನು ತನ್ನ ಇಚ್ಛೆಯಂತೆ ನಡಸುತ್ತಿರುವನು. ಈ ಜಗತ್ತು ಎಂಬುದು ನಾರಾಯಣನಿಗೆ ಶರೀರ, ಈ ಶರೀರದೊಳಗಿನ ಆತ್ಮ ನಾರಾಯಣನೇ. ಜಗತ್ತಿನಲ್ಲಿ ನಾವು ಕಾಣುವ ಚೇತನ ಅಚೇತನಗಳು ಎಲ್ಲವೂ ನಾರಾಯಣನ ಸಾಕಾರವಾದ ಪ್ರಕಾರಗಳು, ಇವು ಎಲ್ಲವೂ ಆತನಿಗೆ ಅಧೀನವಾದವುಗಳು.

ನಾರಾಯಣನು ಸತ್—ಚಿತ್—ಆನಂದ—ಸ್ವರೂಪನು, ಅಕ್ಷರನು, ಅವ್ಯಯನು, ಆಮೃತನು, ಸರ್ವವ್ಯಾಪಿಯು, ಸರ್ವಾಂತರ್ಯಾಮಿಯು, ಸಕಲ ವಾದ ಸತ್ಯ ಸೌಂದರ್ಯಗಳಿಗೂ ನೆಲೆವೀಡು. ನಾರಾಯಣನ ಕರುಣೆ ಸಮುದ್ರ ದಂತೆ ಅಪಾರವಾದುದು, ಕಲ್ಯಾಣಗುಣ ಪರಿಪೂರ್ಣವಾದದ್ದು. ನಾರಾಯಣನ ವಕ್ಷಃಸ್ಥಲದಲ್ಲಿ ಎಂದಿಗೂ ಅಗಲದೆ ನೆಲಸಿರುವ ಜಗನ್ಮಾತೆಯಾದ ಲಕ್ಷ್ಮೀ ದೇವಿಯೇ ಈ ಕೃಪೆಯ ಸ್ವರೂಪ.

ಕೃಪಾಳುವಾದ ನಾರಾಯಣನು ಭಕ್ತರ ಅನುಗ್ರಹಕ್ಕೋಸ್ಕರವಾಗಿ ರಾಮ, ಕೃಷ್ಣ ಮೊದಲಾದ ಅವತಾರಗಳನ್ನು ಎತ್ತಿ ಮನುಷ್ಯರೂಪದಿಂದ

Sri Vidyabharathi Book Centre, Shringeri

CC-O. In Public Domain. Digitized by eGangotri

ಬಂದದ್ದಲ್ಲದೆ, ಕಲ್ಲು, ಮರ, ಲೋಹ ಮುಂತಾದವುಗಳ ಪ್ರತಿಮೆಗಳಲ್ಲಿ 'ಅರ್ಚಾರೂಪ'ವಾಗಿ ನಿಂದು, ಭಕ್ತಪರಾಧೀನನಾಗಿ ತನ್ನ ಸೌಶೀಲ್ಯ, ಸೌಲಭ್ಯ, ವಾತ್ಸಲ್ಯಗಳನ್ನು ಪ್ರಕಟಪಡಿಸಿರುವನು. ಸಹಜವಾಗಿ ತನಗೆ ಆಕಾರಗಳಿಲ್ಲದಿದ್ದರೂ ತನ್ನ ಭಕ್ತರಿಗಾಗಿ ವಿವಿಧವಾದ ರೂಪ ಆಕಾರಗಳನ್ನು ತಾಳುವನು.

ನಾರಾಯಣನ ವಾತ್ಸಲ್ಯ ನಾನಾ ಪ್ರಕಾರವಾದದ್ದು. ತಾನು ಭಕ್ತರಿಗೆ ತಂದೆಯಾಗಿ, ತಾಯಾಗಿ, ಮಿತ್ರನಾಗಿ, ಸ್ವಾಮಿಯಾಗಿ, ಪತಿಯಾಗಿ, ಗುರುವಾಗಿ—ಅವರವರ ಅಭೀಷ್ಟಗಳಿಗೆ ಅನುಗುಣವಾಗಿ, ಕಾಣಿಸಿಕೊಳ್ಳುವನು. ನಾರಾಯಣನು ಹೀಗೆ ಹೊರಗೆ ಕಾಣಿಸಿಕೊಳ್ಳುವುದು ಮಾತ್ರವಲ್ಲ; ಎಲ್ಲರ ಹೃದಯದಲ್ಲಿಯೂ ತಾನು ಅಂತರ್ಯಾಮಿಯಾಗಿದ್ದು, ಚಿತ್ತಶುದ್ಧಿ ಉಂಟಾದಲ್ಲಿ ಅಲ್ಲಿಯೇ ಗೋಚರನಾಗುವನು.

ಇಷ್ಟು ಸುಲಭನಾದ ಪರಮಾತ್ಮನ ಪಾದಸೇವೆಗಿಂತಲೂ ದೊಡ್ಡದಾದ ಪುರುಷಾರ್ಥವು ಜೀವಾತ್ಮನಿಗೆ ಬೇರೊಂದಿಲ್ಲ. ಜೀವಾತ್ಮನಿಗೂ ಪರಮಾತ್ಮನಿಗೂ ಕಳೆಯಲಾರದ ಪ್ರೇಮಸಂಬಂಧವುಂಟು. ಪರಮಾತ್ಮನ ಸ್ವರೂಪವೇ ಪ್ರೇಮವಾದದ್ದರಿಂದ, ಪ್ರೇಮದಿಂದಲೇ ಆತನನ್ನು ಸೇರುವುದು ಸುಲಭ.

ಅದಕ್ಕಾಗಿ ಇತರ ವಿಷಯಗಳಲ್ಲಿ ಆಶೆಯನ್ನು ತೊರೆದು, ಆಶೆಯನ್ನೆಲ್ಲ ಪರಮಾತ್ಮನಲ್ಲಿಗೆ ತಿರುವಬೇಕು. ದೇಹಕ್ಕಿಂತ ಭಿನ್ನವಾದ, ದೇಹದಂತೆ ನಶ್ವರವಲ್ಲದ ಆತ್ಮವಿದೆ ಎಂಬುದನ್ನು ಅರಿತು, 'ನಾನು' 'ನನ್ನದು' ಎಂಬ ಮಮತೆ ಅಹಂಕಾರಗಳನ್ನು ಕಳೆದು, ಮಾಡಬೇಕಾದ ಕರ್ಮಗಳನ್ನೆಲ್ಲ ನಾರಾಯಣನ ಕೈಂಕರ್ಯಗಳೆಂದೇ ಭಾವಿಸಿ ಫಲಾಪೇಕ್ಷೆಯಿಲ್ಲದೆ ಮಾಡಬೇಕು. ನಾರಾಯಣನಿಗೆ ಮಾಡಿದ ಕೈಂಕರ್ಯಕ್ಕೆ ಆ ಕೈಂಕರ್ಯ ಹೊರತಾಗಿ ಬೇರೆಯ ಪ್ರಯೋಜನವಿಲ್ಲ. ಅದಕ್ಕೆ ಪ್ರಯೋಜನ ಅದೇ.

ಹೀಗೆ ಭಗವಂತನ ಕೈಂಕರ್ಯ ಮಾಡಿದರೆ ಎಷ್ಟು ಪ್ರಯೋಜನವೋ ಭಗವಂತನ ಭಕ್ತರಾದ ಭಾಗವತರ ಕೈಂಕರ್ಯ ಮಾಡಿದರೂ ಅಷ್ಟೇ ಪ್ರಯೋಜನ ಎಂದು ತಿಳಿದು ನಡೆಯಬೇಕು.

ಈ ಪ್ರಕಾರವಾದ ಸಂಪೂರ್ಣ ಶರಣಾಗತಿಗೆ **'ಪ್ರಪತ್ತಿ'** ಎಂದು ಹೆಸರು. ಇದು 'ಭಕ್ತಿ' ಗಿಂತ ಸುಲಭ. ಇದಕ್ಕೆ ಯಾವ ರೀತಿಯ ವರ್ಣ, ಲಿಂಗ, ವಿದ್ಯೆ ಎಂಬ ವ್ಯತ್ಯಾಸಗಳೂ ಇಲ್ಲದೆ ಎಲ್ಲರೂ ಅಧಿಕಾರಿಗಳೇ.

CC-O. In Public Domain. Digitized by eGangotri

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ
ಸ್ತ್ರೀಯೋ ವೈಶ್ಯಾಸ್ತಥಾ ಶೂದ್ರಾಃ ತೇಽಪಿ ಯಾಂತಿ ಪರಾಂಗತಿಂ

ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದಂತೆ, ಎಂಥವರಾದರೂ, ಎಷ್ಟೇ ಪತಿತರಾದರೂ, ಪ್ರಪತ್ತಿಮಾರ್ಗವನ್ನು ಹಿಡಿದು ನಡೆದರೆ, ಅವರು ನಾರಾಯಣನ ತಿರುವಡಿಗಳನ್ನು ಸೇರುವರು.

ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ
ತಸ್ಮಾತ್ ಕಾರುಣ್ಯಭಾವೇನ ರಕ್ಷ ರಕ್ಷ ಜನಾರ್ದನ

'ನನಗೆ ಬೇರೆ ರಕ್ಷಕರಿಲ್ಲ, ನೀನೇ ನನಗೆ ರಕ್ಷಕನು. ಆದ್ದರಿಂದ, ಹೇ ಜನಾರ್ದನ, ಕಾರುಣ್ಯಭಾವದಿಂದ ನೀನು ನನ್ನನ್ನು ಕಾಪಾಡು, ಕಾಪಾಡು' ಎಂಬುದು ಇದೇ ಪ್ರಪನ್ನನಮನೋಧರ್ಮ, ಇದೇ ವೈಷ್ಣವನ ಆತ್ಮಸಮರ್ಪಣ.

ಇದೇ ಆಳ್ವಾರ್‌ಗಳು ಲೋಕಕ್ಕೆ ಬದುಕಿ ತೋರಿಸಿಕೊಟ್ಟು ಹೋದ ಸಂದೇಶ.

§

ಆಳ್ವಾರ್‌ಗಳ ಪ್ರಬಂಧಗಳನ್ನು 'ದ್ರಾವಿಡವೇದ' ಎಂದು ಕರೆಯುತ್ತಾರೆ. ಬ್ರಹ್ಮಸೂತ್ರಗಳೂ ಉಪನಿಷತ್ತುಗಳೂ ಭಗವದ್ಗೀತೆಯೂ ಹೇಳುವ ರಹಸ್ಯತ್ರಯವನ್ನೆ ಪ್ರಬಂಧಗಳೂ ಹೇಳುತ್ತವೆ ಎನ್ನುತ್ತಾರೆ. ಈ ಮಾತಿಗೆ ಉದಾಹರಣೆಯಾಗಿ, ಕುಲಶೇಖರ ಆಳ್ವಾರರು ರಚಿಸಿದ **'ಮುಕುಂದಮಾಲಾ'** ಸ್ತೋತ್ರದಲ್ಲಿ ಶ್ರೀಮದ್ಭಗವದ್ಗೀತೆಯ ಸಾರವನ್ನು ಸಂದರ್ಶಿಸಬಹುದು. ಗೀತೆಯ ಹದಿನೆಂಟು ಅಧ್ಯಾಯಗಳಿಗೆ ಕಾಲಾವಕಾಶವಿಲ್ಲದವರಿಗೆ ಇದರ ನಲವತ್ತು ಶ್ಲೋಕಗಳಲ್ಲಿ ಅದೇ ಮನಃಪ್ರಸಾದ ದೊರೆಕೊಳ್ಳುತ್ತದೆ.

ಇಂತಹ 'ಮುಕುಂದಮಾಲೆ'ಯನ್ನು ರಚಿಸಿದ ಶ್ರೀ ಕುಲಶೇಖರರು ಅನಂತಶಯನದ ರಾಜರಾಗಿದ್ದರು. ತಮಿಳನಲ್ಲಿಯೂ ಸಂಸ್ಕೃತದಲ್ಲಿಯೂ ವಿದ್ವಾಂಸರಾಗಿ, ಎರಡು ಭಾಷೆಗಳಲ್ಲೂ ತಮ್ಮ ಭಗವದನುಭವವನ್ನು ಹೇಳಿಕೊಂಡಿದ್ದಾರೆ. ಅವುಗಳಲ್ಲಿ ಒಂದಾದ 'ಮುಕುಂದಮಾಲೆ' ಯೆಂಬ ಈ ಸಂಸ್ಕೃತ ಪ್ರಬಂಧ ಭಾರತದಲ್ಲಿ ಎಲ್ಲಕಡೆಯೂ ಒಂದು ಅತ್ಯುತ್ಕೃಷ್ಟ ಸ್ತೋತ್ರವೆಂದು ಪರಿಗಣಿತವಾಗಿ ಸ್ವೀಕಾರವಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ತಮಿಳುನಾಡಿನ ಹೊರಗಡೆ ಅಷ್ಟು ಪ್ರಚಾರವಾಗದಿರುವ ಇದೇ ಆಳ್ವಾರರ 'ಪೆರುಮಾಳ್ ತಿರುಮೊಳಿ' ಎಂಬ ಮುನ್ನೂರು ಪದ್ಯಗಳಲ್ಲಿ ಭಗವಂತನ ಬಗೆಗೆ ಅವರು ಬೆಳಸಿಕೊಂಡಿದ್ದ ಹಂಬಲದ ಪರಮಾವಧಿಯನ್ನು ಕಾಣಬಹುದು. ಅಲ್ಲಿ ಅವರು ಹೇಳುತ್ತಾರೆ:

"ತಾಯಿ ಕೋಪ ಬಂದಾಗ ಮಗುವನ್ನು ದೂರ ತಳ್ಳಿದರೂ, ತನ್ನ ತಾಯಿಯ ಪೂರ್ವದ ಪ್ರೀತಿಯನ್ನು ನೆನೆದು ಆ ಮಗು ಅವಳ ಕಾಲನ್ನೇ ಕಟ್ಟಿಕೊಂಡು ಅಳುವ ಹಾಗೆ, ನೀನು ತರುವ ದುಃಖವನ್ನು ನೀನೇ ಹೋಗಲಾಡಿಸುವೆಯಾದ್ದರಿಂದ, ಏನಾದರೂ ನಾನು ನಿನ್ನನ್ನು ಬಿಡಲೊಲ್ಲೆ.

"ನೋಡುವವರೆಲ್ಲರ ಎದುರಿಗೂ ತನ್ನ ಪ್ರಿಯನು ತನ್ನನ್ನು ಹೀಯಾಳಿಸಿದನಾದರೂ, ಕುಲಸ್ತ್ರೀಯಾದವಳು ಅವನನ್ನು ಬಿಟ್ಟು ಬೇರೊಬ್ಬನನ್ನು ಮನಸ್ಸಿನಲ್ಲಿಯೂ ನೆನೆಯದ ಹಾಗೆ, ನಿನ್ನ ಕೈಹಿಡಿದ ನಾನು, ನೀನು ನನ್ನ ಕೈಬಿಟ್ಟರೂ, ನೀನಲ್ಲದೆ ಅನ್ಯನನ್ನು ಎಂದಿಗೂ ಪ್ರೀತಿಸಲಾರೆ.

"ವೈದ್ಯನು ತನ್ನ ಮೈಯನ್ನು ಕತ್ತಿಯಿಂದ ಕುಯಿದು, ಕಾಸಿದ ಸೂಜಿಯಿಂದ ಚುಚ್ಚಿ ನೋಯಿಸಿದರೂ, ಆರೋಗ್ಯವಾಗಲು ಬಯಸುವ ರೋಗಿಯು ಅವನಲ್ಲೆ ನಂಬಿಕೆಯಿಡುವಂತೆ, ಪರಾತ್ಪರನಾದ ನಿನ್ನ ಮಾಯೆಯಿಂದ ನನ್ನ ದುಃಖ ದೀರ್ಘಕಾಲ ಬೆಳೆಯುವುದಾದರೂ, ನಿನ್ನಲ್ಲಿ ದಾಸಭಾವದಿಂದಿರುವ ನಾನು ನಿನ್ನ ಸೇವೆಗಾಗಿಯೆ ಕಾದು, ನಿನ್ನ ಕೃಪೆಯನ್ನೆ ಎದುರು ನೋಡುತ್ತಿರುತ್ತೇನೆ.

"ಮಳೆಯನ್ನು ಸುರಿಸದೆ ಮೇಘಗಳು ಎಷ್ಟು ಕಾಲ ತಮ್ಮನ್ನು ಮರೆತಿದ್ದರೂ, ಪಚ್ಚೆಯ ಪೈರು ಮಾತ್ರ ಕತ್ತೆತ್ತಿ ಮೇಲಿನ ಮೇಘವನ್ನೇ ನಿರೀಕ್ಷಿಸುವ ಹಾಗೆ, ಅನುಭವಿಸಿಯೇ ತೀರಬೇಕಾದ ನನ್ನ ದುಃಖವನ್ನು ನೀನು ಹೋಗಲಾಡಿಸದಿದ್ದರೂ, ನನ್ನ ಮನಸ್ಸು ನಿನ್ನ ಕಡೆಗೇ ಎದುರುನೋಡುತ್ತಿರುತ್ತದೆ."

ಇದರಂತೆಯೇ ತಿರುಪತಿ ಕ್ಷೇತ್ರದಲ್ಲಿ ಅವರು ಹಾಡಿದ ರಚನೆಗಳಲ್ಲಿಯೂ ಇದೇ ಹಂಬಲ ಕಂಡುಬರುತ್ತದೆ:

"ನನಗೆ ದ್ರವ್ಯವಾಗಲಿ, ಇಂದ್ರಿಯಸುಖಗಳಾಗಲಿ ಬೇಕಾಗಿಲ್ಲ. ನನಗೆ ಭೂಮಿಯ ರಾಜ್ಯವೂ ಬೇಡ, ಸ್ವರ್ಗದ ಸುಖಗಳೂ ಬೇಡ. ಓ ವೆಂಕಟಾದ್ರಿನಾಥಾ, ನಿನ್ನ ಬೆಟ್ಟದಲ್ಲಿ ನಾನು ವಾಸಿಸುವಂತಾದರೆ ಸಾಕು. ನಿನ್ನ ಪಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳೆಡೆಗೆ ನಾನು ಒಂದು ಹಾದಿಯಾದರೆ ಸಾಕು; ಸುಗಂಧಪುಷ್ಪಗಳ ಮಳೆಗರೆಯುವ ನಿನ್ನ ಹೂದೋಟಗಳಿಗೆ ನೀರು ಒಯ್ಯುವ ನಾಲೆಯಾದರೆ ಸಾಕು; ಬೇಡ, ನಿನ್ನ ದೇವಾಲಯದ ಒಂದು ಕಂಬ ನಾನಾದರೂ ಸಾಕು. ಅಥವಾ, ನಿನ್ನ ಬೆಟ್ಟದ ಮೇಲೆ, ದುಂಬಿಗಳು ಬಂದು ಮುತ್ತಿಕೊಳ್ಳುವ ಒಂದು ಸಂಪಗೆ ಮರವಾದರೂ ಸಾಕು. ಇಲ್ಲವೆ, ಓ ವೆಂಕಟೇಶ, ನಿನ್ನ ದಿವ್ಯಪುಷ್ಕರಿಣಿಯಲ್ಲಿ ನಾನೊಂದು ಮೀನಾದರೂ ಸಾಕು. ಹವಳದ ತುಟಿಗಳ ಓ ವೆಂಕಟೇಶ, ನಿನ್ನ ಚಿನ್ನದ ಬೆಟ್ಟದ ಮೇಲೆ ನಾನು ಏನಾದರೂ ಒಂದು ವಸ್ತುವಾಗಿ, ನಿನ್ನ ಪಾದಗಳ ಸೇವೆಯನ್ನು ಮಾಡುತ್ತಿದ್ದರೆ ಸಾಕು."

ದೇವರನ್ನು ಕುರಿತ ಇದೇ ದಾಹವನ್ನೂ, ಆ ದಾಹದ ಪ್ರಶಮನವನ್ನೂ 'ಮುಕುಂದಮಾಲೆ'ಯಲ್ಲೂ ಕಾಣಬಹುದು. ಜಯದೇವ ಕವಿಯ 'ಗೀತ ಗೋವಿಂದ'ದ ಹಾಗೆ, ಲೀಲಾಶುಕನ 'ಕೃಷ್ಣ ಕರ್ಣಾಮೃತ'ದ ಹಾಗೆ, ಕುಲಶೇಖರ ಆಳ್ವಾರರ 'ಮುಕುಂದಮಾಲೆ' ಕೂಡ ಭಕ್ತಿಗೀತೆಗಳನ್ನು ಹಾಡುವವರಿಗೂ ಅದನ್ನು ಕೇಳುವವರಿಗೂ ತುಂಬ ಪ್ರಿಯವಾದ ಸ್ತೋತ್ರಭಂಡಾರವಾಗಿ ಪ್ರಚಾರದಲ್ಲಿದೆ.

ಕೆಲವೋ ಹಲವೋ ಸ್ತೋತ್ರಗಳನ್ನು ಹೇಳಿಕೊಂಡು, ಭಗವದನುಭವ ಜನಿತವಾದ ಆನಂದದ ಪರವಶತೆಯನ್ನು ರುಚಿ ನೋಡಿದವರು ಮುಕುಂದ ಮಾಲೆಯ ಈ ಸಂಪೂರ್ಣ ಸ್ತೋತ್ರಮುಕ್ತಾಮಂಜರಿಯನ್ನು ಸಂತೋಷದಿಂದ ಸ್ವಾಗತಿಸುವರೆಂಬ ಭರವಸೆ ನನಗುಂಟು. ದೇವರ ಪಾದಾರವಿಂದಗಳಲ್ಲಿ ಸೇರಿದ ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಅಯ್ಯಂಗಾರ್ಯರಂತೆಯೇ ಅವರ ಪ್ರೀತಿಯ ಮಕ್ಕಳೂ ಮೊಮ್ಮಕ್ಕಳೂ ಈ ಮುಕುಂದಮಾಲೆಯನ್ನು ನಿತ್ಯವೂ ಅನುಸಂಧಾನಮಾಡಿ ಚಿತ್ತಶುದ್ಧಿಯನ್ನು ಬೆಳಸಿಕೊಳ್ಳಲಿ ಎಂಬ ಮೂಲೋದ್ದೇಶದಿಂದ ಇದು ಈಗ ಪ್ರಕಟವಾಗಿರುವುದಾದರೂ—ಚಿತ್ತಶುದ್ಧಿಯನ್ನು ಬಯಸುವ ಭಕ್ತಿಪ್ರಿಯರೆಲ್ಲರಿಗೂ ಇದು ಉಪಾದೇಯವಾಗುತ್ತದೆ ಎಂಬ ಭರವಸೆಯಿಂದ ನನ್ನ ಮೊದಲ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ.

೭-೧೨-೫೫
ಮಲ್ಲೇಶ್ವರಂ.

ಜಿ. ಪಿ. ರಾಜರತ್ನಂ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೃಷ್ಣಾಯ ನಮಃ

ಪ್ರಪನ್ನಪಾರಿಜಾತಾಯ
ತೋತ್ರವೇತ್ರೈಕಪಾಣಯೇ
ಜ್ಞಾನಮುದ್ರಾಯ ಕೃಷ್ಣಾಯ
ಗೀತಾಮೃತದುಹೇ ನಮಃ

ಪ್ರಪನ್ನರಿಗೆ ಪಾರಿಜಾತ(ಕಲ್ಪವೃಕ್ಷ)ದಂತಿರುವ, ಒಂದು ಕೈಯಲ್ಲಿ ಪ್ರಚೋದಿಸುವ ಬೆತ್ತವನ್ನು ಹಿಡಿದಿರುವ, ಜ್ಞಾನಮುದ್ರೆಯಿಂದ ಕೂಡಿರುವ, ಗೀತೆಯೆಂಬ ಅಮೃತವನ್ನು ಕರೆಯುತ್ತಿರುವ ಕೃಷ್ಣನಿಗೆ ನಮಸ್ಕಾರ.

ತ್ವಮಕ್ಷರಂ ಪರಮಂ ವೇದಿತವ್ಯಂ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮಂ
ತ್ವಮವ್ಯಯಃ ಶಾಶ್ವತಧರ್ಮಗೋಪ್ತಾ
ಸನಾತನಸ್ತ್ವಂ ಪುರುಷೋ ಮತೋ ಮೇ

ಪ್ರಜೆಗಳೆಲ್ಲರೂ ತಿಳಿಯಬೇಕಾಗಿರುವ ಪರಮವಾದ ಅಕ್ಷರ ನೀನು; ಈ ವಿಶ್ವಕ್ಕೆ ಪರಮವಾದ ಆಧಾರ ನೀನು; ನೀನು ಅವ್ಯಯನು ಮತ್ತು ಶಾಶ್ವತವಾದ ಧರ್ಮವನ್ನು ಕಾಪಾಡುವವನು. ಸನಾತನವಾದ ಪುರುಷನೇ ನೀನು ಎಂದು ನನ್ನ ಮತ.

ತ್ವಮಾದಿದೇವಃ ಪುರುಷಃ ಪುರಾಣಃ
ತ್ವಮಸ್ಯ ವಿಶ್ವಸ್ಯ ಪರಂ ನಿಧಾನಮ್
ವೇತ್ತಾಸಿ ವೇದ್ಯಂ ಚ ಪರಂ ಚ ಧಾಮ
ತ್ವಯಾ ತತಂ ವಿಶ್ವಮನಂತರೂಪ

CC-O. Jagadguru Kripa Vidyaranya Book Centre, Sringeri

CC-O. In Public Domain. Digitized by eGangotri

ನೀನು ಆದಿದೇವನು, ಪುರಾಣಪುರುಷನು. ಈ ವಿಶ್ವಕ್ಕೆ ಪರಮವಾದ ಆಧಾರವು ನೀನು. ತಿಳಿದವನು ನೀನು, ತಿಳಿಯಲ್ಪಡಬೇಕಾದವನೂ ನೀನೇ; ನೀನು ಪರಂಧಾಮನು. ಎಲೈ ಅನಂತರೂಪನೇ, ವಿಶ್ವವೆಲ್ಲವೂ ನಿನ್ನಿಂದ ವ್ಯಾಪ್ತವಾಗಿದೆ.

ನಮಃ ಪುರಸ್ತಾದಥ ಪೃಷ್ಠತಸ್ತೇ
ಸಮೋಽಸ್ತು ತೇ ಸರ್ವತ ಏವ ಸರ್ವ
ಅನಂತವೀರ್ಯಾಮಿತ ವಿಕ್ರಮಸ್ತ್ವಂ
ಸರ್ವಂ ಸಮಾಪ್ನೋಷಿ ತತೋಽಸಿ ಸರ್ವಃ

ಸರ್ವಾತ್ಮನೆ, ನಿನಗೆ ಹಿಂದೆಯೂ ಮುಂದೆಯೂ ಎಲ್ಲ ಕಡೆಗಳಲ್ಲಿಯೂ ನಮಸ್ಕಾರ. ಎಲೈ ಅನಂತವೀರ್ಯನೆ, ನೀನು ಅಮಿತಪರಾಕ್ರಮನು. ನೀನು ಸರ್ವವನ್ನೂ ವ್ಯಾಪಿಸಿಕೊಂಡಿರುವುದರಿಂದ ನೀನು "ಸರ್ವ" ಆಗಿದ್ದೀಯೆ.

ವಾಯುರ್ಯಮೋಽಗ್ನಿರ್ವರುಣಃ ಶಶಾಂಕಃ
ಪ್ರಜಾಪತಿಸ್ತ್ವಂ ಪ್ರಪಿತಾಮಹಶ್ಚ
ನಮೋ ನಮಸ್ತೇಽಸ್ತು ಸಹಸ್ರಕೃತ್ವಃ
ಪುನಶ್ಚ ಭೂಯೋ ಪಿ ನಮೋ ನಮಸ್ತೇ

ವಾಯು, ಯಮ, ಅಗ್ನಿ, ವರುಣ, ಚಂದ್ರ, ಪ್ರಜಾಪತಿ, ಪ್ರಪಿತಾಮಹ (ಬ್ರಹ್ಮನಿಗೂ ತಂದೆಯಾದವನು) ನೀನೇ. ನಿನಗೆ ಸಾವಿರ ಸಲ ನಮಸ್ಕಾರ, ಪುನಃ ನಮಸ್ಕಾರ, ಮತ್ತೆಯೂ ನಿನಗೆ ನಮೋನಮಃ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣಂ ವಂದೇ ಜಗದ್ಗುರುಂ

೧

ವಸುದೇವಸುತಂ ದೇವಂ ಕಂಸಚಾಣೂರಮರ್ದನಂ
ದೇವಕೀಪರಮಾನಂದಂ ಕೃಷ್ಣಂ ವಂದೇ ಜಗದ್ಗುರುಂ

ವಸುದೇವನ ಮಗನಾದ ದೇವನನ್ನು, ಕಂಸಚಾಣೂರರನ್ನು ಮರ್ದನ ಮಾಡಿದವನನ್ನು, ದೇವಕಿಗೆ ಪರಮಾನಂದ ಉಂಟುಮಾಡಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೨

ಅತಸೀಪುಷ್ಪಸಂಕಾಶಂ ಹಾರನೂಪುರಶೋಭಿತಂ
ರತ್ನಕಂಕಣಕೇಯೂರಂ ಕೃಷ್ಣಂ ವಂದೇ ಜಗದ್ಗುರುಂ

ಕರಿಯಗಸೆಯ ಹೂವಿನ ಕಾಂತಿಯುಳ್ಳವನನ್ನು, ಕೊರಳಹಾರದಿಂದಲೂ ಕಾಲುಗೆಜ್ಜೆಗಳಿಂದಲೂ ಕಂಗೊಳಿಸುವವನನ್ನು, ರತ್ನದ ಕೈಬಳೆಗಳು ಭುಜಕೀರ್ತಿಗಳು ಉಳ್ಳವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೩

ಕುಟಿಲಾಲಕಸಂಯುಕ್ತಂ ಪೂರ್ಣಚಂದ್ರನಿಭಾನನಂ
ವಿಲಸತ್ಕುಂಡಲಧರಂ ಕೃಷ್ಣಂ ವಂದೇ ಜಗದ್ಗುರುಂ

ಗುಂಗುರಾದ ಮುಂಗುರುಳುಗಳಿಂದ ಕೂಡಿದವನನ್ನು, ಪೂರ್ಣ ಚಂದ್ರನಿಗೆ ಸಮಾನವಾದ ಮುಖವುಳ್ಳವನನ್ನು, ಹೊಳೆಯುವ ಕಿವಿಯೊಡವೆಗಳನ್ನು ಧರಿಸಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೪

ಮಂದಾರಗಂಧಸಂಯುಕ್ತಂ ಚಾರುಹಾಸಂ ಚತುರ್ಭುಜಂ
ಬರ್ಹಿಪಿಂಛಾವಚೂಡಾಂಕಂ ಕೃಷ್ಣಂ ವಂದೇ ಜಗದ್ಗುರುಂ

ಮಂದಾರಪುಷ್ಪದ ಗಂಧದಿಂದ ಕೂಡಿದವನನ್ನು, ಮನೋಹರವಾದ ನಗುವುಳ್ಳವನನ್ನು, ನಾಲ್ಕು ಭುಜಗಳು ಪಡೆದವನನ್ನು, ತಲೆಯ ಕೂದಲಿನಲ್ಲಿ ನವಿಲುಗರಿ ಸಿಕ್ಕಿಸಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೫

ಉತ್ಫುಲ್ಲಪದ್ಮಪತ್ರಾಕ್ಷಂ ನೀಲಜೀಮೂತಸನ್ನಿಭಂ
ಯಾದವಾನಾಂ ಶಿರೋರತ್ನಂ ಕೃಷ್ಣಂ ವಂದೇ ಜಗದ್ಗುರುಂ

ಚೆನ್ನಾಗಿ ಅರಳಿದ ಪದ್ಮದ ದಳದಂತೆ ಕಣ್ಣುಗಳುಳ್ಳವನನ್ನು, ನೀಲಿಯ ಮೇಘಕ್ಕೆ ಸಮಾನವಾದ ಮೈಯುಳ್ಳವನನ್ನು, ಯಾದವರ ಕುಲಕ್ಕೆ ತಲೆಯೊಡವೆಯಾದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೬

ರುಕ್ಮಿಣೀಕೇಳಿಸಂಯುಕ್ತಂ ಪೀತಾಂಬರಸುಶೋಭಿತಂ
ಅವಾಪ್ತತುಲಸೀಗಂಧಂ ಕೃಷ್ಣಂ ವಂದೇ ಜಗದ್ಗುರುಂ

ರುಕ್ಮಿಣಿಯೊಡನೆ ಕೂಡಿ ಆಡುತ್ತಿರುವವನನ್ನು, ಪೀತಾಂಬರದಿಂದ ಕಂಗೊಳಿಸುವವನನ್ನು, ತುಲಸಿಯ ಗಂಧವನ್ನು ಹೊಂದಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೭

ಗೋಪಿಕಾನಾಂ ಕುಚದ್ವಂದ್ವಕುಂಕುಮಾಂಕಿತವಕ್ಷಸಂ
ಶ್ರೀನಿಕೇತಂ ಮಹೇಷ್ವಾಸಂ ಕೃಷ್ಣಂ ವಂದೇ ಜಗದ್ಗುರುಂ

ಗೋಪಾಲಕಿಯರ ಕುಚದ್ವಂದ್ವಗಳ ಕುಂಕುಮದಿಂದ ಅಲಂಕರಿಸಲ್ಪಟ್ಟ ವಕ್ಷಃಸ್ಥಲವುಳ್ಳವನನ್ನು, ಲಕ್ಷ್ಮಿಗೆ (ತನ್ನ ವಕ್ಷಃಸ್ಥಲವೇ) ಮನೆಯಾದವನನ್ನು, ಮಹಾಧನುರ್ಧರನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

೮

ಶ್ರೀವತ್ಸಾಂಕಂ ಮಹೋರಸ್ಕಂ ವನಮಾಲಾವಿರಾಜಿತಂ
ಶಂಖಚಕ್ರಧರಂ ದೇವಂ ಕೃಷ್ಣಂ ವಂದೇ ಜಗದ್ಗುರುಂ

ಶ್ರೀವತ್ಸದ ಗುರುತು ಉಳ್ಳವನನ್ನು, ವಿಶಾಲವಾದ ವಕ್ಷವುಳ್ಳವನನ್ನು, ವನಮಾಲೆಯಿಂದ ವಿರಾಜಿತನಾದವನನ್ನು, ಶಂಖಚಕ್ರಗಳನ್ನು ಧರಿಸಿದವನನ್ನು—ಜಗದ್ಗುರುವಾದ ಕೃಷ್ಣನನ್ನು ವಂದಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕುಲಶೇಖರ ಆಳ್ವಾರರು ಕರುಣಿಸಿದ ಮುಕುಂದಮಾಲಾ ಸ್ತೋತ್ರ

ಘುಷ್ಯತೇ ಯಸ್ಯ ನಗರೇ ರಂಗಯಾತ್ರಾ ದಿನೇ ದಿನೇ
ತಮಹಂ ಶಿರಸಾ ವಂದೇ ರಾಜಾನಂ ಕುಲಶೇಖರಂ

ಯಾರ ನಗರದಲ್ಲಿ ಶ್ರೀರಂಗಯಾತ್ರೆಯು ದಿನೇ ದಿನೇ ಘೋಷಿಸಲ್ಪಡುತ್ತಿರುವುದೋ—ಆ ಕುಲಶೇಖರ ರಾಜನನ್ನು ನಾನು ಶಿರಸಾ ವಂದಿಸುತ್ತೇನೆ.

೧

ಶ್ರೀವಲ್ಲಭೇತಿ ವರದೇತಿ ದಯಾಪರೇತಿ
ಭಕ್ತಪ್ರಿಯೇತಿ ಭವಲುಂಠನಕೋವಿದೇತಿ
ನಾಥೇತಿ ನಾಗಶಯನೇತಿ ಜಗನ್ನಿವಾಸೇ-
ತ್ಯಾಲಾಪನಂ ಪ್ರತಿಪದಂ ಕುರು ಮೇ ಮುಕುಂದ

ಹೇ ಮುಕುಂದ! 'ಶ್ರೀವಲ್ಲಭ' (ಲಕ್ಷ್ಮಿಗೆ ಪ್ರಿಯನಾದವನೆ) ಎಂದು, 'ವರದ' (ವರಗಳನ್ನು ಕೊಡುವವನೆ) ಎಂದು, 'ದಯಾಪರ' (ಕರುಣಾಳು) ಎಂದು, 'ಭಕ್ತಪ್ರಿಯ' ಎಂದು, 'ಭವ-ಲುಂಠನ-ಕೋವಿದ' (ಜನನ ಮರಣಗಳೆಂಬ ಸಂಸಾರವನ್ನು ನಾಶಮಾಡುವುದರಲ್ಲಿ ಸಮರ್ಥನೆ) ಎಂದು, 'ನಾಥ' (ಸ್ವಾಮಿಯೆ) ಎಂದು, 'ನಾಗಶಯನ' (ಶೇಷನ ಮೇಲೆ ಮಲಗಿದವನೆ) ಎಂದು, 'ಜಗನ್ನಿವಾಸ' (ಜಗವೇ ಮನೆಯಾದವನೆ) ಎಂದು ಹೆಜ್ಜೆ ಹೆಜ್ಜೆಗೂ ನಾನು ಹೇಳುತ್ತಿರುವ ಹಾಗೆ ನೀನು ನನ್ನಲ್ಲಿ (ಕೃಪೆ) ಮಾಡು.

೨

ಜಯತು ಜಯತು ದೇವೋ ದೇವಕೀನಂದನೋಽಯಂ
ಜಯತು ಜಯತು ಕೃಷ್ಣೋ ವೃಷ್ಣಿವಂಶಪ್ರದೀಪಃ
ಜಯತು ಜಯತು ಮೇಘಶ್ಯಾಮಲಃ ಕೋಮಲಾಂಗೋ
ಜಯತು ಜಯತು ಪೃಥ್ವೀಭಾರನಾಶೋ ಮುಕುಂದಃ

Sri Vidyabharathi Book Centre, Sringeri

CC-O. In Public Domain. Digitized by eGangotri

ದೇವಕಿಗೆ ನಂದನ (ಸಂತೋಷವನ್ನುಂಟುಮಾಡುವ ಮಗ)ನಾದ ಈ ದೇವನು ಜಯಿಸಲಿ, ಜಯಿಸಲಿ! ವೃಷ್ಣಿಗಳ ವಂಶಕ್ಕೆ ಪ್ರದೀಪ (ದೊಡ್ಡ ಬೆಳಕು) ಆದ ಕೃಷ್ಣನು ಜಯಿಸಲಿ, ಜಯಿಸಲಿ! ಮೇಘದಂತೆ ಶ್ಯಾಮಲವೂ (ಹಿತವಾದ ಕಪ್ಪು) ಕೋಮಲವೂ ಆದ ಅಂಗಗಳುಳ್ಳವನು ಜಯಿಸಲಿ, ಜಯಿಸಲಿ! ಪೃಥ್ವಿಯ ಭಾರವನ್ನು ನಾಶಮಾಡಿದ ಮುಕುಂದನು ಜಯಿಸಲಿ, ಜಯಿಸಲಿ!

೩

ಮುಕುಂದ ಮೂರ್ಧ್ನಾ ಪ್ರಾಣಿಪತ್ಯ ಯಾಚೆ
ಭವಂತಮೇಕಾಂತಮಿಯಂತಮರ್ಥಂ
ಅವಿಸ್ಮೃತಿಸ್ತ್ವಚ್ಚರಣಾರವಿಂದೇ
ಭವೇ ಭವೇ ಮೇಽಸ್ತು ಭವತ್ಪ್ರಸಾದಾತ್

ಹೇ ಮುಕುಂದ! ನಿನಗೆ ಶಿರಸಾ ನಮಸ್ಕಾರ ಮಾಡಿ, ಏಕಾಂತದಲ್ಲಿ ನಿನ್ನನ್ನು ಇಷ್ಟು ಮಾತ್ರ ಅರ್ಥ (ಇಷ್ಟಾರ್ಥ) ಬೇಡಿಕೊಳ್ಳುತ್ತೇನೆ; ನಿನ್ನ ಚರಣಾರವಿಂದದಲ್ಲಿ ಅವಿಸ್ಮೃತಿಯು (ಮರೆವಿಲ್ಲದೆ ಎಚ್ಚರದಿಂದಿರುವುದು) ಭವ ಭವ (ಜನ್ಮ ಜನ್ಮ)ದಲ್ಲಿಯೂ ನಿನ್ನ ಪ್ರಸಾದ (ಅನುಗ್ರಹ)ದಿಂದ ನನಗೆ ಉಂಟಾಗಲಿ.

೪

ನಾಹಂ ವಂದೇ ತವಚರಣಯೋರ್ದ್ವಂದ್ವಮದ್ವಂದ್ವಹೇತೋಃ
ಕುಂಭೀಪಾಕಂ ಗುರುಮಪಿ ಹರೇ ನಾರಕಂ ನಾಪನೇತುಂ
ರಮ್ಯಾ ರಾಮಾ ಮೃದುತನುಲತಾ ನಂದನೇ ನಾಪಿ ರಂತುಂ
ಭಾವೇ ಭಾವೇ ಹೃದಯಭವನೇ ಭಾವಯೇಯಂ ಭವಂತಂ.

ಹೇ ಹರಿಯೆ! (ಸುಖದುಃಖ, ಲಾಭಾಲಾಭ, ಮಾನಾಪಮಾನಗಳೆಂಬ) ದ್ವಂದ್ವಗಳನ್ನು ಕಳೆದುಕೊಳ್ಳುವುದಕ್ಕೋಸ್ಕರ ನಾನು ನಿನ್ನ ಚರಣದ್ವಂದ್ವಗಳಿಗೆ ವಂದಿಸುವುದಿಲ್ಲ; ಕುಂಭೀಪಾಕ(ವೆಂಬ) ನರಕವು ದೊಡ್ಡದಾದರೂ ಅದನ್ನು ಪರಿಹರಿಸಿಕೊಳ್ಳುವುದಕ್ಕಾಗಿಯೂ (ನಾನು ವಂದಿಸುವುದಿಲ್ಲ); (ಇಂದ್ರನ) ನಂದನ(ವನ)ದಲ್ಲಿ ಮೃದುವಾದ ಮೈಬಳ್ಳಿಗಳನ್ನು ಹೊಂದಿ ರಮ್ಯರಾಗಿರುವ

Sri Vidyabharathi Book Centre, Shringeri

CC-O. In Public Domain. Digitized by eGangotri

ರಾಮೆ (ಸುಂದರಿ) ಯರೊಡನೆ ರಮಿಸುವುದಕ್ಕಾಗಿಯೂ (ನಾನು ವಂದಿಸುತ್ತಿಲ್ಲ.) ಭವಭವ (ಜನ್ಮಜನ್ಮ)ದಲ್ಲಿಯೂ ನನ್ನ ಹೃದಯಭವನದಲ್ಲಿ ನಿನ್ನನ್ನು ಭಾವಿಸುತ್ತಿರುವೆನು. (ಅದು ಈಡೇರಲೆಂದು ನಾನು ವಂದಿಸುವುದು.)

೫

ನಾಸ್ಥಾ ಧರ್ಮೇ ನ ವಸುನಿಚಯೇ ನೈವ ಕಾಮೋಪಭೋಗೇ
ಯದ್ಯದ್ಭವ್ಯಂ ಭವತು ಭಗವನ್ ಪೂರ್ವಕರ್ಮಾನುರೂಪಂ-
ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾಂತರೇಽಪಿ
ತ್ವತ್ಪಾದಾಂಭೋರುಹಯುಗಗತಾ ನಿಶ್ಚಲಾಭಕ್ತಿರಸ್ತು

ಧರ್ಮದಲ್ಲಿಯಾಗಲಿ, ಧನದ ರಾಶಿಯಲ್ಲಾಗಲಿ, ಕಾಮಗಳ ಉಪಭೋಗದಲ್ಲಿಯಾಗಲಿ (ನನಗೆ) ಆಸ್ಥೆ (ಆಕ್ಕರೆ) ಇಲ್ಲ. ಭಗವನ್! ಪೂರ್ವಕರ್ಮಕ್ಕೆ ಅನುರೂಪವಾದದ್ದು ಏನೇನು ಆಗಬೇಕಾಗಿದೆಯೋ ಅದೆಲ್ಲಾ ಆಗಲಿ. ಇದನ್ನು (ಇಷ್ಟವನ್ನು) ನಾನು ಬೇಡಿಕೊಳ್ಳಬೇಕಾದದ್ದು ಮತ್ತು ಇದು ನನಗೆ ಬಹು ಇಷ್ಟ: (ಅದು ಏನೆಂದರೆ)—ಜನ್ಮಜನ್ಮಾಂತರಗಳಲ್ಲಿಯಾದರೂ ನಿನ್ನ ಪಾದಕಮಲಗಳೆರಡರಲ್ಲಿ ಹೋಗಿ ನಿಲ್ಲುವ ನಿಶ್ಚಲಭಕ್ತಿ ನನಗೆ ಉಂಟಾಗಲಿ.

೬

ದಿವಿ ವಾ ಭುವಿ ವಾ ಮಮಾಸ್ತು ವಾಸೋ
ನರಕೇ ವಾ ನರಕಾಂತಕ ಪ್ರಕಾಮಂ
ಅವಧೀರಿತಶಾರದಾರವಿಂದೌ
ಚರಣೌ ತೇ ಮರಣೇಽಪಿ ಚಿಂತಯಾಮಿ

ಹೇ ನರಕಾಂತಕ! ನಾನು ವಾಸಮಾಡುವುದು ಸ್ವರ್ಗದಲ್ಲಿಯಾಗಲಿ, ಅಥವಾ ಭೂಮಿಯಲ್ಲಿ (ಆಗಲಿ), ಅಥವಾ ಇಷ್ಟಬಂದ ನರಕದಲ್ಲಿ (ಆಗಲಿ), (ಎಲ್ಲೇ ಆದರೂ) ಶರತ್ಕಾಲದ ಅರವಿಂದಗಳನ್ನು ಧಿಕ್ಕರಿಸುವ ನಿನ್ನ ಚರಣಗಳೆರಡನ್ನು ನಾನು ಮರಣದಲ್ಲಿ ಕೂಡ ಚಿಂತಿಸುತ್ತೇನೆ.

೭

ಕೃಷ್ಣ ತ್ವದೀಯ ಪದಪಂಕಜಪಂಜರಾಂತ-
ಮದ್ಯೈವ ಮೇ ವಿಶತು ಮಾನಸರಾಜಹಂಸಃ

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಾಣಪ್ರಯಾಣಸಮಯೇ ಕಫವಾತಪಿತ್ತೈಃ
ಕಂಠಾವರೋಧನವಿಧೌ ಸ್ಮರಣಂ ಕುತಸ್ತೇ

ಹೇ ಕೃಷ್ಣ ! ನಿನ್ನ ಪಾದಪದ್ಮಗಳೆಂಬ ಪಂಜರದ ಒಳಕ್ಕೆ ನನ್ನ ಮನಸ್ಸೆಂಬ ರಾಜಹಂಸವು ಈಗಲೇ ಪ್ರವೇಶಮಾಡಲಿ. ಪ್ರಾಣವು (ದೇಹವನ್ನು ಬಿಟ್ಟು) ಪ್ರಯಾಣಮಾಡುವ ಸಮಯದಲ್ಲಿ ಕಫ ವಾತ ಪಿತ್ತಗಳಿಂದ ಗಂಟಲು ಕಟ್ಟಿಕೊಂಡು ಹೋದಾಗ, ನಿನ್ನ ಸ್ಮರಣೆ ಎಲ್ಲಿ ಬಂದೀತು?

೮

ಚಿಂತಯಾಮಿ ಹರಿಮೇವ ಸಂತತಂ
ಮಂದಮಂದಹಸಿತಾನನಾಂಬುಜಂ
ನಂದಗೋಪತನಯಂ ಪರಾತ್ಪರಂ
ನಾರದಾದಿಮುನಿಬೃಂದವಂದಿತಂ

ಮಂದಹಾಸದ ಮೇಲೆ ಮಂದಹಾಸವನ್ನುಳ್ಳ ಮುಖಪದ್ಮದಿಂದ ಕೂಡಿದವನೂ, ನಂದಗೋಪನ ಮಗನೂ, ಪರಾತ್ಪರನೂ, ನಾರದನೇ ಮೊದಲಾದ ಮುನಿಗಳ ವೃಂದ (ಸಮೂಹ)ದಿಂದ ವಂದಿತನೂ ಆದ ಹರಿಯನ್ನೇ ನಾನು ಸಂತತವೂ ಚಿಂತಿಸುತ್ತೇನೆ.

೯

ಕರಚರಣಸರೋಜೇ ಕಾಂತಿಮನ್ನೇತ್ರಮೀನೇ
ಶ್ರಮಮುಷಿಭುಜವೀಚಿವ್ಯಾಕುಲೇಽಗಾಧಮಾರ್ಗೇ
ಹರಿಸರಸಿ ವಿಗಾಹ್ಯಾಪೀಯ ತೇಜೋಜಲೌಘಂ
ಭವಮರುಪರಿಖಿನ್ನಃ ಖೇದಮದ್ಯ ತ್ಯಜಾಮಿ

ಕೈಕಾಲುಗಳೆಂಬ ಕಮಲಗಳನ್ನು ಹೊಂದಿ, ಕಾಂತಿಯುಕ್ತವಾದ ಕಣ್ಣುಗಳೆಂಬ ಮೀನುಗಳಿಂದ ಕೂಡಿ, ಶ್ರಮವನ್ನು ಹೋಗಲಾಡಿಸುವ ಭುಜಗಳೆಂಬ ಅಲೆಗಳಿಂದ ಕಲಕುತ್ತ, ಅಗಾಧವಾದ ಮಾರ್ಗವುಳ್ಳ ಹರಿಯೆಂಬ ಸರೋವರದಲ್ಲಿ ಮುಳುಗಿ, (ಆ ಹರಿಯ) ತೇಜಸ್ಸೆಂಬ ನೀರಿನ ರಾಶಿಯನ್ನು ಕುಡಿದು, (ಇದುವರೆಗೆ) ಭವ (ಸಂಸಾರ)ವೆಂಬ ಮರುಭೂಮಿಯಲ್ಲಿ ಬಹು ಖೇದಗೊಂಡಿರುವ ನಾನು ಈಗ ಆ ಖೇದವನ್ನು ತ್ಯಜಿಸುವೆನು.

CC-O. In Public Domain. Digitized by eGangotri

೧೦

ಸರಸಿಜನಯನೇ ಸಶಂಖಚಕ್ರೇ
ಮುರಭಿದಿ ಮಾ ವಿರಮಸ್ವ ಚಿತ್ತ ರಂತುಂ
ಸುಖಕರಮಪರಂ ನ ಜಾತು ಜಾನೇ
ಹರಿಚರಣಸ್ಮರಣಾಮೃತೇನ ತುಲ್ಯಂ

ಹೇ ಚಿತ್ತವೆ! ಕಮಲದಂತೆ ಕಣ್ಣುಗಳುಳ್ಳವನೂ ಶಂಖಚಕ್ರಗಳನ್ನು ಹೊಂದಿದವನೂ ಆದ ಮುರಮಥನನಲ್ಲಿ ನೀನು ರಮಿಸುವುದನ್ನು ನಿಲ್ಲಿಸಬೇಡ. ಹರಿಯ ಚರಣಗಳ ಸ್ಮರಣಾಮೃತಕ್ಕಿಂತ ಬೇರೆ ಸುಖಕರವಾದದ್ದನ್ನು, ಆದಕ್ಕೆ ಸಮಾನವಾದದ್ದನ್ನು, ನಾನು ಎಂದಿಗೂ ಅರಿಯೆ.

೧೧

ಮಾಭೀರ್ಮಂದಮನೋವಿಚಿಂತ್ಯ ಬಹುಧಾಯಾಮಿಶ್ಚಿರಂ ಯಾತನಾಃ
ನಾಮೀ ನಃ ಪ್ರಭವಂತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ
ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯಸ್ವ ನಾರಾಯಣಂ
ಲೋಕಸ್ಯ ವ್ಯಸನಾಪನೋದನಕರೋ ದಾಸಸ್ಯ ಕಿಂ ನ ಕ್ಷಮಃ

ಎಲೈ ಮಂದಮನಸ್ಸೇ, ಯಮನಿಂದ ಆಗುವ ಯಾತನೆಗಳನ್ನು ಅನೇಕ ವಿಧವಾಗಿ ಚಿರಕಾಲ ಚಿಂತಿಸಿ ಭಯಗೊಳ್ಳಬೇಡ. ಈ ಪಾಪಗಳೆಂಬ ರಿಪುಗಳು ನಮ್ಮನ್ನು ಆಳಲಾರವು; (ಏಕೆಂದರೆ) ಶ್ರೀಧರನು ನಮಗೆ ಸ್ವಾಮಿಯಲ್ಲವೆ? ಆಲಸ್ಯವನ್ನು ಕಳೆದುಕೊಂಡು, ಭಕ್ತಿಗೆ ಸುಲಭ(ವಾಗಿ ದೊರಕುವವ)ನಾದ ನಾರಾಯಣನನ್ನು ಧ್ಯಾನಮಾಡು. ಲೋಕದ ವ್ಯಥೆಯನ್ನು ಹೋಗಲಾಡಿಸುವಾತನು ದಾಸನದನ್ನು (ಅವನ ವ್ಯಥೆಯನ್ನು) ಹೋಗಲಾಡಿಸಲು ಸಮರ್ಥನಾಗನೆ?

೧೨

ಭವಜಲಧಿಗತಾನಾಂ ದ್ವಂದ್ವವಾತಾಹತಾನಾಂ
ಸುತದುಹಿತೃಕಳತ್ರತ್ರಾಣಭಾರಾರ್ದಿತಾನಾಂ
ವಿಷಮವಿಷಯತೋಯೇ ಮಜ್ಜತಾಮಪ್ಲವಾನಾಂ
ಭವತು ಶರಣಮೇಕೋ ವಿಷ್ಣುಪೋತೋ ನರಾಣಾಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಭವ (ಸಂಸಾರ)ವೆಂಬ ಸಮುದ್ರದಲ್ಲಿ ಹೋಗಿಬಿದ್ದು, (ಸುಖದುಃಖ, ಲಾಭಾಲಾಭ, ಮಾನಪಮಾನಗಳೆಂಬ) ದ್ವಂದ್ವಗಳ ಗಾಳಿಯೇಟಿಗೆ ಸಿಕ್ಕಿ, ಮಗ ಮಗಳು ಹೆಂಡತಿ ಇವರುಗಳನ್ನು ಪೋಷಿಸುವ ಭಾರದಿಂದ ನೊಂದು, ವಿಷಮವಾದ ವಿಷಯಗಳೆಂಬ ನೀರಿನಲ್ಲಿ ತೆಪ್ಪದ ಅವಲಂಬನವಿಲ್ಲದೆ ಮುಳುಗಿ ಹೋಗುತ್ತಿರುವ ಮನುಷ್ಯರಿಗೆ—ವಿಷ್ಣುವೆಂಬ ಅದೊಂದೇ ನಾವೆ ಶರಣಾಗಲಿ.

೧೩

ಭವಜಲಧಿಮಗಾಧಂ ದುಸ್ತರಂ ನಿಸ್ತರೇಯಂ
ಕಥಮಹಮಿತಿ ಚೇತೋ ಮಾ ಸ್ಮಗಾಃ ಕಾತರತ್ವಂ
ಸರಸಿಜದೃಶಿ ದೇವೇ ತಾವಕೀ ಭಕ್ತಿರೇಕಾ
ನರಕಭಿದಿ ನಿಷಣ್ಣಾ ತಾರಯಿಷ್ಯತ್ಯವಶ್ಯಂ

ಎಲೆ ಮನಸ್ಸೆ! 'ಅಗಾಧವೂ (ಆಳವೂ) ದುಸ್ತರವೂ (ದಾಟಲು ಕಠಿನವೂ) ಆದ ಭವ (ಸಂಸಾರ) ಸಾಗರವನ್ನು ನಾನು ಹೇಗೆ ದಾಟಿಯೇನು?' ಎಂದು ನೀನು ಕಾತರತೆಯನ್ನು ಹೊಂದಬೇಡ. ತಾವರೆಯಂತೆ ಕಣ್ಣುಗಳುಳ್ಳ, ನರಕಾಂತಕನಾದ ದೇವನಲ್ಲಿ ನೀನು ನೆಲೆಗೊಳಿಸಿದ ನಿನ್ನ ಭಕ್ತಿಯೊಂದೇ ಅವಶ್ಯವಾಗಿ ನಿನ್ನನ್ನು ದಾಟಿಸುತ್ತದೆ.

೧೪

ತೃಷ್ಣಾ ತೋಯೇ ಮದನಪವನೋದ್ಧೂತಮೋಹೋರ್ಮಿಮಾಲೇ
ದಾರಾವರ್ತೇ ತನಯಸಹಜಗ್ರಾಹಸಂಘಾಕುಲೇ ಚ
ಸಂಸಾರಾಖ್ಯೇ ಮಹತಿ ಜಲಧೌ ಮಜ್ಜತಾಂ ನಸ್ತ್ರಿಧಾಮನ್
ಪಾದಾಂಭೋಜೇ ವರದ ಭವತೋ ಭಕ್ತಿನಾವಂ ಪ್ರಯಚ್ಛ

ತೃಷ್ಣೆ (ಆಸೆ) ಯೆಂಬ ನೀರಿನಿಂದ ಕೂಡಿ, ಮನ್ಮಥನೆಂಬ ಗಾಳಿಯಿಂದ ಮೇಲೆಬ್ಬಿಸಲ್ಪಟ್ಟ ಮೋಹವೆಂಬ ಅಲೆಗಳನ್ನೊಳಕೊಂಡು, ಹೆಂಡತಿಯೆಂಬ ಸುಳಿಯನ್ನು ಉಳ್ಳದ್ದಾಗಿ, ಮಕ್ಕಳು ಒಡಹುಟ್ಟಿದವರು ಎಂಬ ಮೊಸಳೆಗಳ ಸಮೂಹದಿಂದ ತುಂಬಿ, ಸಂಸಾರವೆಂದು ಹೆಸರುಪಡೆದಿರುವ ಮಹಾಸಮುದ್ರದಲ್ಲಿ ಮುಳುಗುತ್ತಿರುವ ನನಗೆ (ಸಮುದ್ರ, ಸೂರ್ಯಮಂಡಲ ಮತ್ತು ಭಕ್ತರ ಹೃದಯ

Sri Vidyabharathi Book Centre, Shringeri

CC-O. In Public Domain. Digitized by eGangotri

ಎಂಬ ಮೂರು ಧಾಮ (ವಾಸಸ್ಥಾನ)ಗಳನ್ನುಳ್ಳ ಹರಿಯೇ!—ವರದನೇ!—
ನಿನ್ನ ಪಾದಕಮಲಗಳಲ್ಲಿ ಭಕ್ತಿ ಎಂಬ ನಾವೆಯನ್ನು ನಮಗೆ ಕರುಣಿಸು.

೧೫

ಮಾದ್ರಾಕ್ಷಂ ಕ್ಷೀಣಪುಣ್ಯಾನ್ ಕ್ಷಣಮಪಿ ಭವತೋ
ಭಕ್ತಿಹೀನಾನ್ ಪದಾಬ್ಜೇ
ಮಾಶ್ರೌಷಂ ಶ್ರಾವ್ಯಬಂಧಂ ತವ ಚರಿತ-
ಮಪಾಸ್ಯಾನ್ಯದಾಖ್ಯಾನಜಾತಂ
ಮಾಸ್ಮಾರ್ಷಂ ಮಾಧವ ತ್ವಾಮಪಿ ಭುವನಪತೇ
ಚೇತಸಾಪಹ್ನುವಾನಾನ್
ಮಾ ಭೂವಂ ತ್ವತ್ಸಪರ್ಯಾವ್ಯತಿಕರರಹಿತೋ
ಜನ್ಮಜನ್ಮಾಂತರೇಽಪಿ

ನಿನ್ನ ಪಾದಕಮಲಗಳಲ್ಲಿ ಭಕ್ತಿಯಿಲ್ಲದೆ ಇರುವ ಕ್ಷೀಣಪುಣ್ಯವನ್ನು ಒಂದು ಕ್ಷಣ ಕೂಡ ನಾನು ನೋಡಲಾರೆ! ಕಿವಿಯಿಂದ ಕೇಳಲುತಕ್ಕ ರಚನೆಯುಳ್ಳ ನಿನ್ನ ಚರಿತವನ್ನು ಬಿಟ್ಟು, ಇತರ ಕತೆಗಳ ಗುಂಪನ್ನು ನಾನು ಕೇಳಲಾರೆ! ಭುವನಪತಿಯಾದ ಹೇ ಮಾಧವನೆ! ನಿನ್ನನ್ನು ಇಲ್ಲವೆಂಬರನ್ನು ನಾನು ಮನಸ್ಸಿನಿಂದ ನೆನೆಯಲೂ ಆರೆನು! ಈ ಜನ್ಮದಲ್ಲಿಯೂ ಮುಂದಿನ ಜನ್ಮಗಳಲ್ಲಿಯೂ ನಿನ್ನ ಪೂಜೆಯ ಸಂಬಂಧವನ್ನು ನಾನು ಬಿಟ್ಟರಲಾರೆನು!

೧೬

ಜಿಹ್ವೇ ಕೀರ್ತಯ ಕೇಶವಂ ಮುರರಿಪುಂ ಚೇತೋ ಭಜ ಶ್ರೀಧರಂ
ಪಾಣಿದ್ವಂದ್ವ ಸಮರ್ಚಯಾಚ್ಯುತಕಥಾಃ ಶ್ರೋತ್ರದ್ವಯ ತ್ವಂ ಶೃಣು
ಕೃಷ್ಣಂ ಲೋಕಯಲೋಚನದ್ವಯಹರೇರ್ಗಚ್ಛಾಂಘ್ರಿಯುಗ್ಮಾಲಯಂ
ಜಿಘ್ರ ಘ್ರಾಣ ಮುಕುಂದಪಾದತುಲಸೀಂ ಮೂರ್ಧನ್ನಮಾಧೋಕ್ಷಜಂ

ನಾಲಗೆಯೇ, ಕೇಶವನನ್ನು ಕೀರ್ತಿಸು. ಮನಸ್ಸೇ, ಮುರರಿಪುವನ್ನು ಭಜಿಸು. ಎರಡು ಕೈಯೇ, ಶ್ರೀಧರನನ್ನು ಚೆನ್ನಾಗಿ ಆರ್ಚಿಸು. ಎರಡು ಕಿವಿಯೇ, ಅಚ್ಯುತನ ಕಥೆಯನ್ನು ನೀನು ಕೇಳು. ಎರಡು ಕಣ್ಣೇ, ಕೃಷ್ಣನನ್ನು ಕಾಣು.

Sri Vidyabharathi Book Centre, Sringeri

CC-O. In Public Domain. Digitized by eGangotri

ಎರಡು ಕಾಲೇ, ಹರಿಯ ಆಲಯಕ್ಕೆ ಹೋಗು. ಮೂಗೇ, ಮುಕುಂದನ ಪಾದಗಳ ತುಲಸಿಯನ್ನು ಆಘ್ರಾಣಿಸು. ತಲೆಯೇ, ಅಧೋಕ್ಷಜ (ಇಂದ್ರಿಯ ವ್ಯಾಪಾರಗಳಿಲ್ಲದ ನಾರಾಯಣ)ನಿಗೆ ನಮಸ್ಕರಿಸು.

೧೭

ಹೇ ಲೋಕಾಃ ಶೃಣುತ ಪ್ರಸೂತಿಮರಣವ್ಯಾಧೇಶ್ಚಿಕಿತ್ಸಾಮಿಮಾಂ
ಯೋಗಜ್ಞಾಸ್ಸಮುದಾಹರಂತಿ ಮುನಯೋ

ಯಾಂ ಯಾಜ್ಞವಲ್ಕ್ಯಾದಯಃ
ಅಂತರ್ಜ್ಯೋತಿರಮೇಯಮೇಕಮಮೃತಂ

ಕೃಷ್ಣಾಖ್ಯಮಾಪೀಯತಾಂ
ತತ್ ಪೀತಂ ಪರಮೌಷಧಂ ವಿತನುತೇ ನಿರ್ವಾಣಮಾತ್ಯಂತಿಕಂ

ಲೋಕದ ಜನಗಳೇ, ಯೋಗವನ್ನು ತಿಳಿದ ಯಾಜ್ಞವಲ್ಕ್ಯ ಮೊದಲಾದ ಮುನಿಗಳು ಜನನ ಮರಣಗಳೆಂಬ ವ್ಯಾಧಿಗೆ ಯಾವ ಚಿಕಿತ್ಸೆಯನ್ನು ಹೇಳುತ್ತಾರೆಯೋ ಅದನ್ನು ಕೇಳಿರಿ. ಹೃದಯದೊಳಗೆ ಜ್ಯೋತಿಯಾಗಿದ್ದು ಅಮೇಯವೂ (ಅಳೆಯಲಾರದ್ದೂ) ಅದ್ವಿತೀಯವೂ ಆದ ಕೃಷ್ಣನೆಂಬ ಹೆಸರಿನ ಅಮೃತವನ್ನು ಪಾನಮಾಡಿರಿ. ಕುಡಿದ ಆ ಪರಮೌಷಧವು ಆತ್ಯಂತಿಕ (ಪರಿಪೂರ್ಣ) ವಾದ ನಿರ್ವಾಣ (ಸುಖ) ವನ್ನು ಉಂಟುಮಾಡುತ್ತದೆ.

೧೮

ಹೇ ಮರ್ತ್ಯಾಃ ಪರಮಂ ಹಿತಂ ಶೃಣುತ ವೋ ವಕ್ಷ್ಯಾಮಿ ಸಂಕ್ಷೇಪತಃ
ಸಂಸಾರಾರ್ಣವಮಾಪದೂರ್ಮಿ ಬಹುಳಂ ಸಮ್ಯಕ್ ಪ್ರವಿಶ್ಯ ಸ್ಥಿತಾಃ
ನಾನಾಜ್ಞಾನಮಪಾಸ್ಯ ಚೇತಸಿ ನಮೋ ನಾರಾಯಣಾಯೇತ್ಯಮುಂ
ಮಂತ್ರಂ ಸಪ್ರಣವಂ ಪ್ರಣಾಮಸಹಿತಂ ಪ್ರಾವರ್ತಯಧ್ವಂ ಮುಹುಃ

ಮರ್ತ್ಯರೆ, ಆಪತ್ತುಗಳೆಂಬ ಅಲೆಗಳಿಂದ ತುಂಬಿರುವ ಸಂಸಾರ ಸಮುದ್ರವನ್ನು ಚೆನ್ನಾಗಿ ಪ್ರವೇಶಿಸಿ ನೆಲಸಿರುವ ನಿಮಗೆ ಪರಮವಾದ ಹಿತವನ್ನು ಸಂಕ್ಷೇಪವಾಗಿ ಹೇಳುತ್ತೇನೆ, ಕೇಳಿರಿ. ನಾನಾ (ರೀತಿಯ) ಜ್ಞಾನವನ್ನು ಬಿಟ್ಟು,

Sri Vidyabharathi Book Centre, Sringeri

CC-O. In Public Domain. Digitized by eGangotri

'ನಮೋ ನಾರಾಯಣಾಯ' ಎಂಬ ಈ ಮಂತ್ರವನ್ನು ಓಂಕಾರ ಸಹಿತವಾಗಿ, ಪ್ರಣಾಮದೊಡನೆ ಬಾರಿಬಾರಿಗೂ ಮನಸ್ಸಿನಲ್ಲಿ ಚೆನ್ನಾಗಿ ತಿರುವಿಹಾಕಿರಿ.

೧೯

ಪೃಥ್ವೀ ರೇಣುರಣುಃ ಪಯಾಂಸಿ ಕಣಿಕಾಃ ಫಲ್ಗು ಸ್ಫುಲಿಂಗೋ ಲಘುಃ
ತೇಜೋ ನಿಶ್ವಸನಂ ಮರುತ್ ತನುತರಂ ರಂಧ್ರಂ ಸುಸೂಕ್ಷ್ಮಂ ನಭಃ
ಕ್ಷುದ್ರಾ ರುದ್ರಪಿತಾಮಹಪ್ರಭೃತಯಃ ಕೀಟಾಸ್ಸಮಸ್ತಾಃ ಸುರಾಃ
ಪೃಷ್ಟೇ ಯತ್ರ ಸ ತಾವಕೋ ವಿಜಯತೇ ಭೂಮಾವಧೂತಾವಧಿಃ

ಎಲ್ಲಿ (ನಿನ್ನ ಮಹಿಮೆಯನ್ನು) ನೋಡಿದರೆ—ಭೂಮಿಯು ರೇಣು ಅಣು ಆಗುತ್ತದೋ, (ಸಮುದ್ರದಂತಹ) ನೀರುಗಳು ತುಂತುರುಗಳಾಗುತ್ತವೋ, (ಸೂರ್ಯ ಚಂದ್ರ ಮುಂತಾದವರ) ತೇಜಸ್ಸು ನಿಸ್ಸಾರವೂ ಲಘುವೂ ಆದ ಕಿಡಿಯಾಗುತ್ತದೋ, ವಾಯುವು ಅತ್ಯಂತ ಸೂಕ್ಷ್ಮವಾದ ನಿಶ್ವಾಸವಾಗುತ್ತದೋ, ಆಕಾಶವು ತುಂಬ ಚಿಕ್ಕದಾದ ರಂಧ್ರವಾಗುತ್ತದೋ, ರುದ್ರ ಬ್ರಹ್ಮ ಮುಂತಾದವರು ಕ್ಷುದ್ರರಾಗುತ್ತಾರೋ, ಸಮಸ್ತ ಸುರರೂ ಕೀಟಗಳಾಗುತ್ತಾರೆಯೋ, ಅಂತಹ ಎಲ್ಲೆಯನ್ನು ಮೀರಿದ ನಿನ್ನ ಮಹಿಮೆಯು ವಿಜಯಿಸುತ್ತದೆ.

೨೦

ಬದ್ಧೇನಾಂಜಲಿನಾ ನತೇನ ಶಿರಸಾ ಗಾತ್ರೈಃ ಸರೋಮೋದ್ಗಮೈಃ
ಕಂಠೇನ ಸ್ವರಗದ್ಗದೇನ ನಯನೇನೋದ್ಗೀರ್ಣಬಾಷ್ಪಾಂಬುನಾ
ನಿತ್ಯಂ ತ್ವಚ್ಚರಣಾರವಿಂದಯುಗಳಧ್ಯಾನಾಮೃತಾಸ್ವಾದಿನಾಂ
ಅಸ್ಮಾಕಂ ಸರಸೀರುಹಾಕ್ಷ ಸತತಂ ಸಂಪದ್ಯತಾಂ ಜೀವಿತಂ

ಸರಸೀರುಹಾಕ್ಷನೆ, ಜೋಡಿಸಿದ ಕೈಬೊಗಸೆಯಿಂದಲೂ, ತಗ್ಗಿಸಿದ ತಲೆಯಿಂದಲೂ, ರೋಮಾಂಚವನ್ನು ಹೊಂದಿದ ಅವಯವಗಳಿಂದಲೂ, ಗದ್ಗದವಾದ ಸ್ವರವನ್ನುಳ್ಳ ಕಂಠದಿಂದಲೂ, ಹೊರಸೂಸುತ್ತಿರುವ ಕಣ್ಣೀರಿನಿಂದ ತುಂಬಿದ ಕಣ್ಣುಗಳಿಂದಲೂ ಕೂಡಿ ನಿತ್ಯವೂ ನಿನ್ನ ಚರಣಾರವಿಂದಗಳೆರಡರ ಧ್ಯಾನವೆಂಬ ಅಮೃತವನ್ನು ಆಸ್ವಾದನೆಮಾಡುತ್ತಿರುವ ನಮಗೆ, ಸದಾ ಕಾಲವೂ (ಇದೇ ರೀತಿಯ) ಜೀವಿತವು ಹೊಂದಿಕೊಳ್ಳಲಿ ಅರಳಿ

CC-O. Jagadguru Shankaracharya Book Centre, Sringeri

CC-O. In Public Domain. Digitized by eGangotri

೨೦

ಹೇ ಗೋಪಾಲಕ ಹೇ ಕೃಪಾಜಲನಿಧೇ ಹೇ ಸಿಂಧುಕನ್ಯಾಪತೇ
ಹೇ ಕಂಸಾಂತಕ ಹೇ ಗಜೇಂದ್ರಕರುಣಾಪಾರೀಣ ಹೇ ಮಾಧವ
ಹೇ ರಾಮಾನುಜ ಹೇ ಜಗತ್ತ್ರಯಗುರೋ ಹೇ ಪುಂಡರೀಕಾಕ್ಷ ಮಾಂ
ಹೇ ಗೋಪೀಜನನಾಥ ಪಾಲಯ ಪರಂ ಜಾನಾಮಿ ನ ತ್ವಾಂ ವಿನಾ

ಎಲೈ ಗೋಪಾಲಕನೆ, ಎಲೈ ಕೃಪಾಸಮುದ್ರನೆ, ಎಲೈ ಸಮುದ್ರನ ಮಗಳಾದ ಲಕ್ಷ್ಮಿಯ ಪತಿಯೇ, ಎಲೈ ಕಂಸನನ್ನು ಕೊಂದವನೇ, ಎಲೈ ಗಜೇಂದ್ರನಲ್ಲಿ ಅತಿಶಯವಾದ ಕರುಣೆಯನ್ನು ತೋರಿದವನೇ, ಎಲೈ ಮಾಧವ (ಲಕ್ಷ್ಮೀಪತಿಯೇ), ಎಲೈ ಬಲರಾಮನ ತಮ್ಮನೇ, ಎಲೈ ಮೂರು ಲೋಕಗಳಿಗೂ ಗುರುವಾದವನೆ, ಎಲೈ ಕಮಲದಂತೆ ಕಣ್ಣುಳ್ಳವನೇ, ಎಲೈ ಗೋಪೀಜನಗಳ ಸ್ವಾಮಿಯೆ, ನನ್ನನ್ನು ಪಾಲಿಸು. ನಿನ್ನನ್ನು ಬಿಟ್ಟು ಬೇರೊಬ್ಬರನ್ನು ನಾನು ಅರಿಯೆ.

೨೧

ಭಕ್ತಾಪಾಯಭುಜಂಗಗಾರುಡಮಣಿಃ ತ್ರೈಲೋಕ್ಯರಕ್ಷಾಮಣಿಃ
ಗೋಪೀಲೋಚನಚಾತಕಾಂಬುದಮಣಿಃ ಸೌಂದರ್ಯಮುದ್ರಾಮಣಿಃ
ಯಃ ಕಾಂತಾಮಣಿರುಕ್ಮಿಣೀಘನಕುಚದ್ವಂದ್ವೈಕಭೂಷಾಮಣಿಃ
ಶ್ರೇಯೋ ದೇವಶಿಖಾಮಣಿರ್ದಿಶತು ನೋ ಗೋಪಾಲಚೂಡಾಮಣಿಃ

ಭಕ್ತರ ಅಪಾಯಗಳೆಂಬ ಸರ್ಪಕ್ಕೆ ಗರುಡಮಣಿಯೂ, ಮೂರು ಲೋಕಗಳ ರಕ್ಷಾಮಣಿಯೂ, ಗೋಪಿಯರ ಕಣ್ಣುಗಳೆಂಬ ಜಾತಕಗಳಿಗೆ (ನೀರನ್ನು ಕೊಡುವ) ಮೇಘಮಣಿಯೂ, ಕಾಂತಾಮಣಿಯಾದ ರುಕ್ಮಿಣಿಯ ಘನ ಕುಚದ್ವಂದ್ವಕ್ಕೆ ಏಕ ಭೂಷಾಮಣಿಯೂ, ದೇವಶಿಖಾಮಣಿಯೂ ಆದ ಗೋಪಾಲಚೂಡಾಮಣಿಯು ನಮಗೆ ಶ್ರೇಯಸ್ಸನ್ನು ನೀಡಲಿ.

೨೨

ಶತ್ರುಚ್ಛೇದೈಕಮಂತ್ರಂ ಸಕಲಮುಪನಿಷದ್ವಾಕ್ಯಸಂಪೂಜ್ಯಮಂತ್ರಂ
ಸಂಸಾರೋತ್ತಾರಮಂತ್ರಂ ಸಮಿತಿಷು ವಿಜಯಪ್ರಾಪ್ತಿಸಂಸ್ಥಾನಮಂತ್ರಂ

Sri Vidyabharati Foundation, Bengaluru

CC-O. In Public Domain. Digitized by eGangotri

ಸರ್ವೈಶ್ವರ್ಯೈಕಮಂತ್ರಂ ವ್ಯಸನಭುಜಗಸಂದಷ್ಟಸಂತ್ರಾಣಮಂತ್ರಂ
ಜಿಹ್ವೇ ಶ್ರೀಕೃಷ್ಣಮಂತ್ರಂ ಜಪ ಜಪ ಸತತಂ ಜನ್ಮಸಾಫಲ್ಯಮಂತ್ರಂ

ಶತ್ರುಗಳನ್ನು ಭೇದಿಸುವ ಏಕ ಮಂತ್ರವೂ, ಸಕಲ ಉಪನಿಷದ್ವಾಕ್ಯಗಳಿಂದ ಸಂಪೂಜೆಯನ್ನು ಕೊಂಡಿರುವ ಮುಂತ್ರವೂ, (ಜನನ ಮರಣಗಳ) ಸಂಸಾರ (ವನ್ನು ದಾಟಿಸುವ) ಉತ್ತಾರಮಂತ್ರವೂ, ಜೆನ್ನಾಗಿ ಕಟ್ಟಕೊಂಡಿರುವ ಕತ್ತಲೆಯ ಮೊತ್ತವನ್ನು ಹೋಗಲಾಡಿಸುವ ಮಂತ್ರವೂ, ಸರ್ವೈಶ್ವರ್ಯ(ವನ್ನು ಸಾಧಿಸಿಕೊಡುವ) ಏಕ ಮಂತ್ರವೂ, ವ್ಯಸನವೆಂಬ ಹಾವು ಕಚ್ಚಿದವರಿಗೆ ಜೆನ್ನಾಗಿ ತ್ರಾಣಕೊಡುವ ಮಂತ್ರವೂ, ಜನ್ಮವನ್ನು ಸಫಲವನ್ನಾಗಿ ಮಾಡುವ ಮಂತ್ರವೂ ಆದ ಶ್ರೀ ಕೃಷ್ಣ ಮಂತ್ರವನ್ನು, ಎಲೈ ನಾಲಗೆಯೇ, ಸತತವೂ ಜಪಿಸು, ಜಪಿಸು.

೨೪

ವ್ಯಾಮೋಹಪ್ರಶಮೌಷಧಂ ಮುನಿಮನೋವೃತ್ತಿಪ್ರವೃತ್ತ್ಯೌಷಧಂ
ದೈತ್ಯೇಂದ್ರಾರ್ತಿಕರೌಷಧಂ ತ್ರಿಭುವನೇ ಸಂಜೀವನೈಕೌಷಧಂ
ಭಕ್ತಾತ್ಯಂತಹಿತೌಷಧಂ ಭವಭಯಪ್ರಧ್ವಂಸನೈಕೌಷಧಂ
ಶ್ರೇಯಃಪ್ರಾಪ್ತಿಕರೌಷಧಂ ಪಿಬ ಮನಃ ಶ್ರೀಕೃಷ್ಣದಿವ್ಯೌಷಧಂ

ವ್ಯಾಮೋಹವನ್ನು ಜೆನ್ನಾಗಿ ಶಮನಮಾಡುವ ಔಷಧವೂ, ಮುನಿಗಳ ಮನೋವೃತ್ತಿಯನ್ನು ಪ್ರವೃತ್ತಿಗೊಳಿಸುವ ಔಷಧವೂ, ರಾಕ್ಷಸರಾಜರಿಗೆ ಸಂಕಟಕರವಾದ ಔಷಧವೂ, ಮೂರು ಲೋಕಗಳಲ್ಲಿಯೂ ಸಂಜೀವನವಾದ ಏಕ ಔಷಧವೂ, ಭಕ್ತರಿಗೆ ಅತ್ಯಂತ ಹಿತವಾದ ಔಷಧವೂ, ಭವ (ಹುಟ್ಟುಸಾವುಗಳ) ಭಯವನ್ನು ಸಂಪೂರ್ಣವಾಗಿ ನಾಶಮಾಡುವ ಏಕ ಔಷಧವೂ, ಶ್ರೇಯಸ್ಸನ್ನು ದೊರಕಿಸಿಕೊಡುವ ಔಷಧವೂ ಆದ ಶ್ರೀ ಕೃಷ್ಣನೆಂಬ ದಿವ್ಯೌಷಧವನ್ನು, ಎಲೈ ಮನಸ್ಸೇ, ನೀನು ಕುಡಿ.

೨೫

ಆಮ್ನಾಯಾಭ್ಯಸನಾನ್ಯರಣ್ಯರುದಿತಂ ವೇದವ್ರತಾನ್ಯನ್ವಹಂ
ಮೇದಶ್ಚೈದಫಲಾನಿ ಪೂರ್ತವಿಧಯಃ ಸರ್ವೇ ಹುತಂ ಭಸ್ಮನಿ
ತೀರ್ಥಾನಾಮವಗಾಹನಾನಿ ಚ ಗಜಸ್ನಾನಂ ವಿನಾ ಯತ್ಪದ-
ದ್ವಂದ್ವಾಂಭೋಜಕಿಶೋರಭೃಂಗ ಕುರುತೇ ದೇವಃ ಸ ನಾರಾಯಣಃ

Sri Vidyaranya Book Centre, Shringeri

CC-O. In Public Domain. Digitized by eGangotri

ಯಾರ ಪಾದಪದ್ಮಗಳೆರಡರ ಸಂಸ್ಮರಣವಿಲ್ಲದಿದ್ದರೆ ವೇದಗಳ ಅಭ್ಯಾಸಗಳು ಅರಣ್ಯರೋದನವಾಗುವುವೋ, ಪ್ರತಿ ದಿನವೂ ನಡಸುವ ವೇದವ್ರತಗಳು ಬೊಜ್ಜನ್ನು ಕತ್ತರಿಸುವುದರಲ್ಲಿ ಮಾತ್ರ ಸಫಲವಾಗುತ್ತವೋ, (ಕೆರೆ, ಬಾವಿ, ಛತ್ರ ಮುಂತಾದವುಗಳನ್ನು ಮಾಡಿಸುವ) ಪೂರ್ತವಿಧಿಗಳು ಎಲ್ಲವೂ ಬೂದಿಯಲ್ಲಿ ಮಾಡಿದ ಹೋಮವಾಗುತ್ತವೋ, ತೀರ್ಥಗಳಲ್ಲಿ ಮುಳುಗಿ ಸ್ನಾನ ಮಾಡುವುದು ಆನೆ ನೀರಿಗೆ ಇಳಿದಂತೆ ಆಗುತ್ತದೋ—ಅಂತಹ ದೇವನಾದ ನಾರಾಯಣನು ವಿಜಯಿಸುತ್ತಾನೆ.

೨೬

ಶ್ರೀಮನ್ನಾಮ ಪ್ರೋಚ್ಯ ನಾರಾಯಣಾಖ್ಯಂ
ಕೇನ ಪ್ರಾಪುರ್ವಾಂಛಿತಂ ಪಾಪಿನೋಽಪಿ
ಹಾ! ನಃ ಪೂರ್ವಂ ವಾಕ್ ಪ್ರವೃತ್ತಾ ನ ತಸ್ಮಿನ್
ತೇನ ಪ್ರಾಪ್ತಂ ಗರ್ಭವಾಸಾದಿದುಃಖಂ

'ನಾರಾಯಣ' ಎಂಬ ಶ್ರೀಮಂತವಾದ ಹೆಸರನ್ನು ಹೇಳಿ, (ತಾವು) ಪಾಪಿಗಳಾದರೂ ಕೂಡ, ಯಾರುತಾನೆ ತಾವು ಬಯಸಿದ್ದನ್ನು ಪಡೆಯಲಿಲ್ಲ? ಅಯ್ಯೋ, (ಈ ಜನ್ಮಕ್ಕೆ) ಪೂರ್ವದಲ್ಲಿ ನಮ್ಮ ಮಾತು ಅದರಲ್ಲಿ ಪ್ರವರ್ತಿಸಲಿಲ್ಲ. ಆದ್ದರಿಂದ (ನಮಗೆ ಈಗ) ಗರ್ಭವಾಸವೇ ಮೊದಲಾದ ದುಃಖ ಪ್ರಾಪ್ತವಾಯಿತು.

೨೭

ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ
ಮತ್ಪ್ರಾರ್ಥನೀಯ ಮದನುಗ್ರಹ ಏಷ ಏವ
ತ್ವದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯ ಭೃತ್ಯ
ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ

ಮಧುಕೈಟಭರಿಗೆ ಶತ್ರುವಾದವನೇ, ನನ್ನ ಜನ್ಮಕ್ಕೆ ಇದು ಫಲ; ನಾನು (ನಿನ್ನನ್ನು) ಪ್ರಾರ್ಥಿಸಿಕೊಳ್ಳಬೇಕಾದ್ದೂ (ನೀನು) ನನಗೆ ಅನುಗ್ರಹಿಸಬೇಕಾದ್ದೂ ಇದೇ:—(ಯಾವುದು ಎಂದರೆ) ಎಲೈ ಲೋಕನಾಥ, ನಿನ್ನ ಭೃತ್ಯನ ಭೃತ್ಯನ ಪರಿಚಾರಕನ ಭೃತ್ಯನ ಭೃತ್ಯನ ಭೃತ್ಯನ ಭೃತ್ಯನೆಂದು ನನ್ನನ್ನು ಸ್ಮರಿಸು.

CC-O. In Public Domain. Digitized by eGangotri, Vidyabharathi Book Centre, Sringeri

CC-O. In Public Domain. Digitized by eGangotri

೨೮

ನಾಥೇ ನ ಪುರುಷೋತ್ತಮೇ ತ್ರಿಜಗತಾಮೇಕಾಧಿಪೇ ಚೇತಸಾ
ಸೇವ್ಯೇ ಸ್ವಸ್ಯ ಪದಸ್ಯ ದಾತರಿ ಸುರೇ ನಾರಾಯಣೇ ತಿಷ್ಠತಿ
ಯಂ ಕಂಚಿತ್ ಪುರುಷಾಧಮಂ ಕತಿಪಯಗ್ರಾಮೇಶಮಲ್ಪಾರ್ಥದಂ
ಸೇವಾಯೈ ಮೃಗಯಾಮಹೇ ನರಮಹೋ! ಮೂಕಾ ವರಕಾ ವಯಂ

ನಮಗೆ ನಾಥನೂ, ಪುರುಷೋತ್ತಮನೂ, ಮೂರು ಲೋಕಕ್ಕೆ ಏಕಾಧಿಪತಿಯೂ, ಮನಃಪೂರ್ವಕವಾಗಿ ಸೇವಿಸಲು ತಕ್ಕವನೂ, ತನ್ನ ಪದವಿಯನ್ನೆ ಕೊಡುವ ದೇವನೂ ಆದ ನಾರಾಯಣನು ಇದ್ದಾನೆ. (ಆದರೂ) ಯಾವನೋ ಪುರುಷಾಧಮನನ್ನು, ಕೆಲವು ಗ್ರಾಮಗಳಿಗೆ ಒಡೆಯನಾಗಿ ಅಲ್ಪಾರ್ಥವನ್ನು ಕೊಡುವ ನರನನ್ನು ಹುಡುಕುತ್ತೇವೆ. ಇದು ಆಶ್ಚರ್ಯ! ನಾವು ಮೂಢರು, (ನಮಗೆ ಒಳ್ಳೆಯದಾದ್ದನ್ನು ತಿಳಿಯದ) ಕೀಳರು.

೨೯

ಮದನ ಪರಿಹರ ಸ್ಥಿತಿಂ ಮದೀಯೇ
ಮನಸಿ ಮುಕುಂದಪದಾರವಿಂದಧಾಮ್ನಿ
ಹರನಯನಕೃಶಾನುನಾ ಕೃಶೋಽಸಿ
ಸ್ಮರಸಿ ನ ಚಕ್ರಪರಾಕ್ರಮಂ ಮುರಾರೇಃ

ಮದನನೆ, ಮುಕುಂದನ ಪಾದಕಮಲಗಳಿಗೆ ಮನೆಯಾಗಿರುವ ನನ್ನ ಮನಸ್ಸಿನಲ್ಲಿ ನೀನು ನೆಲಸಿರುವುದನ್ನು ಬಿಟ್ಟುಬಿಡು. ಹರನ ಕಣ್ಣಿನ ಬೆಂಕಿಯಿಂದ (ಮೊದಲೇ) ಕೃಶನಾಗಿದ್ದೀಯೆ. ಮುರಾರಿಯ ಚಕ್ರದ ಪರಾಕ್ರಮವನ್ನು ನೀನು ಸ್ಮರಿಸುವುದಿಲ್ಲವೆ?

೩೦

ತತ್ತ್ವಂ ಬ್ರವಾಣಾನಿ ಪರಂ ಪರಸ್ಮಾತ್
ಮಧುಕ್ಷರಂತೀವ ಸತಾಂ ಫಲಾನಿ
ಪ್ರಾವರ್ತಯ ಪ್ರಾಂಜಲಿರಸ್ಮಿ ಜಿಹ್ವೇ
ನಾಮಾನಿ ನಾರಾಯಣಗೋಚರಾಣಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಉತ್ತಮವಾದುದಕ್ಕಿಂತ ಉತ್ತಮವಾದ ತತ್ತ್ವವನ್ನು ಹೇಳುವುದಾಗಿಯೂ, ಮಧುವನ್ನು ಸುರಿಸುವಂಥದಾಗಿಯೂ, ಸತ್ಪುರುಷರಿಗೆ ಫಲ ಕೊಡುವುದಾಗಿಯೂ ಇರುವ ನಾರಾಯಣ (ಪರವಾಗಿ) ತೋರಿಬರುವ ನಾಮಗಳನ್ನು, ಎಲೈ ನಾಲಗೆಯೇ, ಕೈಮುಗಿದುಕೊಂಡು (ಬೇಡಿಕೊಳ್ಳುತ್ತ) ಇದ್ದೀನೆ, ಮತ್ತೆ ಮತ್ತೆ (ನಾಲಗೆಯಲ್ಲಿ) ತಿರುವಿಹಾಕು.

೩೧

ಇದಂ ಶರೀರಂ ಪರಿಣಾಮಪೇಶಲಂ
ಪತತ್ಯವಶ್ಯಂ ಶ್ಲಥಸಂಧಿಜರ್ಝರಂ
ಕಿಮೌಷಧೈಃ ಕ್ಲಿಶ್ಯಸಿ ಮೂಢ ದುರ್ಮತೇ
ನಿರಾಮಯಂ ಕೃಷ್ಣರಸಾಯನಂ ಪಿಬ

ಈ ಶರೀರವು ಬರುಬರುತ್ತ ನಿಸ್ಸಾರವಾಗುತ್ತದೆ, ಕೀಲುಗಳು ಸಡಿಲಿ ಜರ್ಝರವಾಗಿ ಅವಶ್ಯ ಬಿದ್ದುಹೋಗುತ್ತವೆ. ಎಲೈ ಮೂಢನೇ, ದುರ್ಮತಿಯೇ, ಏಕೆ (ವೃಥಾ) ಔಷಧಗಳಿಂದ ಕ್ಲೇಶಪಡುವೆ? ರೋಗಗಳೆ ಇಲ್ಲದಂತೆ ಮಾಡುವ ಕೃಷ್ಣರಸಾಯನವನ್ನು ಕುಡಿ.

೩೨

ದಾರಾ ವಾರಾಕರವರಸುತಾ ತೇ ತನುಜೋ ವಿರಿಂಚಃ
ಸ್ತೋತ್ರಾ ವೇದಸ್ತವ ಸುರಗಣೋ ಭೃತ್ಯವರ್ಗಃ ಪ್ರಸಾದಃ
ಮುಕ್ತಿರ್ಮಾಯಾ ಜಗದವಿಕಲಂ ತಾವಕೀ ದೇವಕೀ ತೇ
ಮಾತಾ ಮಿತ್ರಂ ಬಲರಿಪುಸುತಃ ತ್ವಯ್ಯತೋಽನ್ಯಂ ನ ಚಾನೇ

ನಿನ್ನ ಹೆಂಡತಿಯು ಸಮುದ್ರನ ಶ್ರೇಷ್ಠ ಪುತ್ರಿ; ನಿನ್ನ ಮಗ ಬ್ರಹ್ಮ; ನಿನ್ನನ್ನು ಸ್ತೋತ್ರಮಾಡುವುದು ವೇದ; ದೇವತೆಗಳ ಗಣವೆ ನಿನ್ನ ಭೃತ್ಯವರ್ಗ; ಮುಕ್ತಿ ನಿನ್ನ ಪ್ರಸಾದ; ಅವಿಕಲ(ಸಂಪೂರ್ಣ)ವಾದ ಜಗತ್ತು ನಿನ್ನ ಸಂಬಂಧವಾದ ಮಾಯೆ; ದೇವಕಿ ನಿನ್ನ ತಾಯಿ; ಬಲರಿಪುವಾದ ಇಂದ್ರನಿಗೆ ಮಗನಾದ ಅರ್ಜುನನು ನಿನ್ನ ಮಿತ್ರ; (ಇಂತಹ) ನಿನ್ನನ್ನು ಹೊರತು ಬೇರೊಬ್ಬರನ್ನು ನಾನು ಅರಿಯೆ.

Sri Vidyabharathi Book Centre, Sringeri

CC-O. In Public Domain. Digitized by eGangotri

೩೩

ಕೃಷ್ಣೋ ರಕ್ಷತು ನೋ ಜಗತ್ರಯಗುರುಃ ಕೃಷ್ಣಂ ನಮಸ್ಯಾಮ್ಯಹಂ
ಕೃಷ್ಣೇನಾಮರಶತ್ರವೋ ವಿನಿಹತಾಃ ಕೃಷ್ಣಾಯ ತಸ್ಮೈ ನಮಃ
ಕೃಷ್ಣಾದೇವ ಸಮುತ್ಥಿತಂ ಜಗದಿದಂ ಕೃಷ್ಣಸ್ಯ ದಾಸೋಽಸ್ಮ್ಯಹಂ
ಕೃಷ್ಣೇ ತಿಷ್ಠತಿ ಸರ್ವಮೇತದಖಿಲಂ ಹೇ ಕೃಷ್ಣ ರಕ್ಷಸ್ವ ಮಾಂ

ಮೂರು ಲೋಕಗಳಿಗೂ ಗುರುವಾದ ಕೃಷ್ಣನು ನಮ್ಮನ್ನು ರಕ್ಷಿಸಲಿ. ನಾನು ಕೃಷ್ಣನನ್ನು ನಮಸ್ಕರಿಸುತ್ತೇನೆ. ಕೃಷ್ಣನಿಂದ ದೇವತೆಗಳ ಶತ್ರುಗಳಾದ ರಾಕ್ಷಸರು ಹತರಾದರು; ಅಂತಹ ಕೃಷ್ಣನಿಗೆ ನಮಸ್ಕಾರ. ಈ ಜಗತ್ತು ಕೃಷ್ಣನ ದೆಸೆಯಿಂದಲೆ ಉದಯಿಸಿತು. ನಾನು ಕೃಷ್ಣನ ದಾಸನಾಗಿದ್ದೇನೆ. ಈ ಸರ್ವವೂ ಅಖಿಲವೂ ಕೃಷ್ಣನಲ್ಲಿ ನೆಲಸಿ ನಿಂತಿದೆ. ಎಲೈ ಕೃಷ್ಣನೇ, ನನ್ನನ್ನು ರಕ್ಷಿಸು.

೩೪

ತತ್ ತ್ವಂ ಪ್ರಸೀದ ಭಗವನ್ ಕುರು ಮಯ್ಯನಾಥೇ
ವಿಷ್ಣೂ ಕೃಪಾಂ ಪರಮಕಾರುಣಿಕಃ ಕಿಲ ತ್ವಂ
ಸಂಸಾರಸಾಗರನಿಮಗ್ನಮನಂತದೀನ-
ಮುದ್ಧರ್ತುಮರ್ಹಸಿ ಹರೇ ಪುರುಷೋತ್ತಮೋಽಸಿ

ಭಗವಂತನೇ, ಆದ್ದರಿಂದ ನೀನು ನನ್ನಲ್ಲಿ ಪ್ರಸನ್ನನಾಗು. ವಿಷ್ಣುವೆ, ಅನಾಥನಾದ ನನ್ನಲ್ಲಿ ಕೃಪೆ ಮಾಡು. ನೀನು ಪರಮ ಕಾರುಣಿಕನಲ್ಲವೆ! ಅನಂತನೆ, ಸಂಸಾರ ಸಾಗರದಲ್ಲಿ ಮುಳುಗಿ, ದೀನನಾಗಿರುವ ನನ್ನನ್ನು ಉದ್ಧರಿಸಲು ನೀನು ಅರ್ಹನಾಗಿದ್ದೀಯೆ. ಹರಿಯೆ, ನೀನು ಪುರುಷೋತ್ತಮನಾಗಿದ್ದೀಯೆ.

೩೫

ನಮಾಮಿ ನಾರಾಯಣಪಾದಪಂಕಜಂ
ಕರೋಮಿ ನಾರಾಯಣಪೂಜನಂ ಸದಾ
ವದಾಮಿ ನಾರಾಯಣನಾಮನಿರ್ಮಲಂ
ಸ್ಮರಾಮಿ ನಾರಾಯಣತತ್ತ್ವಮವ್ಯಯಂ

Sri Vidyabharathi Book Centre, Sringeri

CC-O. In Public Domain. Digitized by eGangotri

ನಾನು ನಾರಾಯಣನ ಪಾದಪಂಕಜವನ್ನು ನಮಸ್ಕರಿಸುತ್ತೇನೆ; ನಾರಾಯಣನ ಪೂಜೆಯನ್ನು ಮಾಡುತ್ತೇನೆ; ನಿರ್ಮಲವಾದ ನಾರಾಯಣ ನಾಮವನ್ನು ಹೇಳುತ್ತೇನೆ; ಅವ್ಯಯವಾದ (ನಾಶವಿಲ್ಲದ) ನಾರಾಯಣ ತತ್ತ್ವವನ್ನು ಸ್ಮರಿಸುತ್ತೇನೆ.

೩೬

ಶ್ರೀನಾಥ ನಾರಾಯಣ ವಾಸುದೇವ
ಶ್ರೀ ಕೃಷ್ಣ ಭಕ್ತಪ್ರಿಯ ಚಕ್ರಪಾಣೇ
ಶ್ರೀ ಪದ್ಮನಾಭಾಚ್ಯುತ ಕೈಟಭಾರೇ
ಶ್ರೀ ರಾಮ ಪದ್ಮಾಕ್ಷ ಹರೇ ಮುರಾರೇ

ಶ್ರೀನಾಥ, ನಾರಾಯಣ, ವಾಸುದೇವ, ಶ್ರೀಕೃಷ್ಣ, ಭಕ್ತಪ್ರಿಯ, ಚಕ್ರಪಾಣಿ, ಶ್ರೀ ಪದ್ಮನಾಭ, ಅಚ್ಯುತ, ಕೈಟಭಾರಿ, ಶ್ರೀ ರಾಮ, ಪದ್ಮಾಕ್ಷ, ಹರಿ, ಮುರಾರಿ (ಎಂಬುದಾಗಿ)—

೩೭

ಅನಂತ ವೈಕುಂಠ ಮುಕುಂದ ಕೃಷ್ಣ
ಗೋವಿಂದ ದಾಮೋದರ ಮಾಧವೇತಿ
ವಕ್ತುಂ ಸಮರ್ಥೋऽಪಿ ನ ವಕ್ತಿ ಕಶ್ಚಿತ್
ಅಹೋ! ಜನಾನಾಂ ವ್ಯಸನಾಭಿಮುಖ್ಯಂ

ಅನಂತ, ವೈಕುಂಠ, ಮುಕುಂದ, ಕೃಷ್ಣ, ಗೋವಿಂದ, ದಾಮೋದರ, ಮಾಧವ ಎಂಬುದಾಗಿ ಹೇಳಲು ಸಮರ್ಥರಾಗಿದ್ದರೂ ಯಾರೂ ಹೇಳುವುದಿಲ್ಲ ವಲ್ಲ! ಇದಲ್ಲವೆ ಆಶ್ಚರ್ಯ! ಜನಗಳ ಮುಖ ವ್ಯಸನಗಳ ಕಡೆಗೇ ತಿರುಗಿದೆ!

೩೮

ಧ್ಯಾಯಂತಿ ಯೇ ವಿಷ್ಣುಮನಂತಮವ್ಯಯಂ
ಹೃತ್ಪದ್ಮಮಧ್ಯೇ ಸತತಂ ವ್ಯವಸ್ಥಿತಂ
ಸಮಾಹಿತಾನಾಂ ಸತತಾಭಯಪ್ರದಂ
ತೇಯಾಂತಿ ಸಿದ್ಧಿಂ ಪರಮಾಂ ಚ ವೈಷ್ಣವೀಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಂತನೂ, ಅವ್ಯಯನೂ, ಹೃದಯಪದ್ಮದ ಮಧ್ಯದಲ್ಲಿ ಸಂತತವಾಗಿ ನೆಲಸಿನಿಂತವನೂ, ಸ್ಥಿರವಾದ ಚಿತ್ತವುಳ್ಳವರಿಗೆ ಅಭಯವನ್ನು ಕೊಡುವವನೂ ಆದ ವಿಷ್ಣುವನ್ನು ಯಾರು ಧ್ಯಾನ ಮಾಡುತ್ತಾರೋ ಅವರು ಅತ್ಯುತ್ತಮವಾದ ವೈಷ್ಣವ ಸಿದ್ಧಿಯನ್ನು ಪಡೆಯುತ್ತಾರೆ.

೩೯

ಕ್ಷೀರಸಾಗರತರಂಗಶೀಕರಾ-
ಸಾರತಾರಕಿತಚಾರುಮೂರ್ತಯೇ
ಭೋಗಿಭೋಗಶಯನೀಯಶಾಯಿನೇ
ಮಾಧವಾಯ ಮಧುವಿದ್ವಿಷೇ ನಮಃ

ಕ್ಷೀರಸಾಗರದ ಅಲೆಗಳ ತುಂತುರುಗಳ ಧಾರೆಯಿಂದ ನಕ್ಷತ್ರಖಚಿತವಾದಂತೆ ಮನೋಹರನಾಗಿರುವ ಮೂರ್ತಿಗೆ, ಹಾವಿನ ಹೆಡೆಯೆಂಬ ಹಾಸಿಗೆಯ ಮೇಲೆ ಮಲಗಿದವನಿಗೆ, ಮಾಧವನಿಗೆ, ಮಧುವೈರಿಗೆ ನಮಸ್ಕಾರ.

೪೦

ಯಸ್ಯ ಪ್ರಿಯೌ ಶ್ರುತಿಧರೌ ಕವಿಲೋಕವೀರೌ
ಮಿತ್ರೇ ದ್ವಿಜನ್ಮವರಪದ್ಮಶರಾವಭೂತಾಂ
ತೇನಾಂಬುಜಾಕ್ಷಚರಣಾಂಬುಜಷಟ್ಪದೇನ
ರಾಜ್ಞಾ ಕೃತಾ ಕೃತಿರಿಯಂ ಕುಲಶೇಖರೇಣ

ಶ್ರುತಿಧರರೂ (ವೇದಗಳನ್ನು ಬಲ್ಲವರೂ) ಕವಿಲೋಕವೀರರೂ ದ್ವಿಜಶ್ರೇಷ್ಠರೂ ಆದ 'ಪದ್ಮ' ಮತ್ತು 'ಶರ' ಎಂಬವರಿಬ್ಬರು ಯಾರಿಗೆ ಪ್ರಿಯರೂ ಮಿತ್ರರೂ ಆಗಿದ್ದರೋ—ಆ 'ಅಂಬುಜಾಕ್ಷ ಚರಣಾಂಬುಜ ಪಟ್ಪದ'ನಾದ (ಕಮಲದಂತೆ ಕಣ್ಣುಗಳುಳ್ಳ ನಾರಾಯಣನ ಪಾದಪದ್ಮಗಳಲ್ಲಿ ದುಂಬಿಯಂತಿರುವ) ಕುಲಶೇಖರ ರಾಜನಿಂದ ಈ ಕೃತಿಯು ಮಾಡಲ್ಪಟ್ಟಿತು.

ಮುಕುಂದಮಾಲೆಯು ಆದರ ಕನ್ನಡ ಅನುವಾದದೊಡನೆ ಮುಗಿಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಜಿತಂ ತೇ ಸ್ತೋತ್ರ

೧

ಜಿತಂ ತೇ ಪುಂಡರೀಕಾಕ್ಷ ಜಿತಂ ತೇ ಭಕ್ತವತ್ಸಲ
ಜಿತಂ ತೇ ಕಮಲಾಕಾಂತ ಜಿತಂ ತೇ ಪುರುಷೋತ್ತಮ

ಜಯ ನಿನಗೆ ಪುಂಡರೀಕಾಕ್ಷ! ಜಯ ನಿನಗೆ ಭಕ್ತವತ್ಸಲ! ಜಯ ನಿನಗೆ ಕಮಲಾಕಾಂತ! ಜಯ ನಿನಗೆ ಪುರುಷೋತ್ತಮ!

೨

ತ್ವಮೇವ ವೇತ್ಸಿ ಶ್ರೇಯೋ ಮೇ ನೇದಮೇತದಿತೀತಿ ಚ
ಬುದ್ಧಿಯೋಗಂ ಚ ಮೇ ದೇಹಿ ಯೇನ ತ್ವಾಮುಪಯಾಮ್ಯಹಂ

ನನಗೆ ಇದು ಶ್ರೇಯಸ್ಸು, ಇದು ಅಲ್ಲ—ಎಂಬುದನ್ನು ನೀನೇ (ನೀನು ಮಾತ್ರ) ಬಲ್ಲೆ. ಯಾವುದರಿಂದ ನಿನ್ನ ಬಳಿ ಸಾರಬಹುದೋ ಅಂತಹ ಬುದ್ಧಿಯೋಗವನ್ನು ನನಗೆ ಕೊಡು.

೩

ಉಪಚಾರಾಪದೇಶೇನ ಕೃತಾನ್ ಅಹರಹರ್ಮಯಾ
ಅಪಚಾರಾನಿಮಾನ್ ಸರ್ವಾನ್ ಕ್ಷಮಸ್ವ ಪುರುಷೋತ್ತಮ

ಉಪಚಾರಗಳೆಂದು ನಂಬಿಕೊಂಡು ದಿನದಿನವೂ ನಾನು ಮಾಡುತ್ತಿರುವ ಅಪಚಾರಗಳು ಇವೆಲ್ಲವನ್ನೂ ಕ್ಷಮಿಸಿಬಿಡು, ಪುರುಷೋತ್ತಮನೆ.

೪

ಶರಣಂ ತ್ವಾಂ ಪ್ರಪನ್ನೋಽಸ್ಮಿ ಶರಣಾಗತವತ್ಸಲ
ಕಟಾಕ್ಷೈಃ ಕರುಣಾಪೂರ್ಣೈಃ ಸಮಾಲೋಕಯ ಮಾಂ ವಿಭೋ

ಶರಣಾಗತವತ್ಸಲನೆ, ನಾನು ನಿನಗೆ ಶರಣಾಗಿ, ನಿನ್ನಲ್ಲಿ ಪ್ರಪತ್ತಿಯುಳ್ಳವನಾಗಿದ್ದೇನೆ. ಪ್ರಭುವೆ, ಕರುಣೆಯಿಂದ ಪೂರ್ಣವಾದ ಕಟಾಕ್ಷಗಳಿಂದ ನನ್ನನ್ನು ಚೆನ್ನಾಗಿ ನೋಡು.

Sri Vidyabharathi Book Centre, Sringeri

CC-O. In Public Domain. Digitized by eGangotri

'ಮುಕುಂದಮಾಲಾ'ದ ಜ್ಞಾಪಕರೂಪ

ನಲವತ್ತೇ ನಲವತ್ತು ಸಂಸ್ಕೃತ ಶ್ಲೋಕಗಳಿಂದ ಕೂಡಿರುವ 'ಮುಕುಂದ ಮಾಲಾ' ಪ್ರಬಂಧವು ಅರ್ಥಗೌರವದಲ್ಲಿ ತಮಿಳಿನ 'ನಾಲಾಯಿರಂ' ಪ್ರಬಂಧಕ್ಕೆ ಸಮಾನವಾದದ್ದು. ವೇದೋಪನಿಷತ್ತುಗಳನ್ನು ಸ್ವತಂತ್ರವಾಗಿ ಓದಿಕೊಳ್ಳಲಾರದವರಿಗೆ ಭಗವದ್ಗೀತೆ ಹೇಗೋ 'ನಾಲಾಯಿರಂ ನಮ್ಮ ಪಾಲಿಗಿಲ್ಲವಲ್ಲಾ' ಎಂದುಕೊಳ್ಳುವವರಿಗೆ 'ಮುಕುಂದಮಾಲಾ' ಹಾಗೆ ಎಂದು ಹೇಳಬಹುದು.

ಈ ನಲವತ್ತು ಶ್ಲೋಕಗಳನ್ನು ಕುಲಶೇಖರರು ಯಾವ ಕ್ರಮದಲ್ಲಿ ಹೇಳಿಕೊಟ್ಟರೋ ಅದೇ ಕ್ರಮದಲ್ಲಿ, ಸಂಪ್ರದಾಯ ಯಾವ ಕ್ರಮವನ್ನು ನಡಸಿಕೊಂಡು ಬಂದಿದೆಯೋ ಅದೇ ಕ್ರಮದಲ್ಲಿ ಇವುಗಳನ್ನು ಹೇಳುವುದು ಉಚಿತ.

ಅದು ಆದನಂತರ, ಅದರೊಳಗಿನ ಭಗವದ್ವಿಷಯವನ್ನು ನಾವು ನಾವು ನಮಗೆ ಅನುಕೂಲವಾದ ರೀತಿಯಲ್ಲಿ ಜ್ಞಾಪಿಸಿಕೊಳ್ಳಬೇಕಾದ್ದು ಅದು ಉಚಿತ. ಇದರಿಂದ ಮನನ ಸುಲಭವಾಗುತ್ತದೆ.

ನಾನು ಜ್ಞಾಪಿಸಿಕೊಳ್ಳುವ ಕ್ರಮವನ್ನು ಕೆಳಗೆ ಕಾಣಿಸಿದ್ದೇನೆ. ಸೂಕ್ತವೆಂದು ಕಂಡರೆ ಸ್ವೀಕರಿಸಬಹುದು.

ಕುಲಶೇಖರ ವಂದನ

ಯಾರ ನಗರದಲ್ಲಿ ಪ್ರತಿದಿನವೂ ಶ್ರೀರಂಗಕ್ಕೆ ಹೋಗುವ ಯಾತ್ರೆಯು ಘೋಷಿಸಲ್ಪಡುತ್ತಿರುವುದೋ–ಆ ಕುಲಶೇಖರ ರಾಜನನ್ನು ನಾನು ಶಿರಸಾ ವಂದಿಸುತ್ತೇನೆ. (ಆರಂಭದ ತನಿಯನ್.)

ಕುಲಶೇಖರ ರಾಜನು ಪದ್ಮಾಕ್ಷನಾದ ನಾರಾಯಣನ ಪಾದಪದ್ಮಗಳಲ್ಲಿ ದುಂಬಿಯಂತಿರುವವನು; ವೇದಗಳನ್ನು ಬಲ್ಲವರೂ ಕವಿಲೋಕವೀರರೂ ಆದ 'ಪದ್ಮ' ಮತ್ತು 'ಶರ' ಎಂಬ ಇಬ್ಬರು ದ್ವಿಜಶ್ರೇಷ್ಠರು ಈ ರಾಜನಿಗೆ ಪ್ರಿಯ ಮಿತ್ರರು. ಇಂತಹ ಕುಲಶೇಖರನಿಂದ ಮುಕುಂದಮಾಲೆಯು ರಚಿಸಲ್ಪಟ್ಟಿತು.

CC-O. In Public Domain. Digitized by eGangotri

ಕುಲಶೇಖರರ ಪ್ರಪತ್ತಿ

ದೇವಕಿಯ ಮಗನಾದ ದೇವನಿಗೆ, ವೃಷ್ಣಿವಂಶಕ್ಕೆ ಪ್ರದೀಪನಾದ ಕೃಷ್ಣನಿಗೆ, ಮೇಘದಂತೆ ಶ್ಯಾಮಲನಾದ ಕೋಮಲಾಂಗನಿಗೆ, ಭೂಭಾರವನ್ನು ನಾಶಮಾಡುವ ಮುಕುಂದನಿಗೆ ಜಯವಾಗಲಿ. (೨)

ನಂದಗೋಪನ ಮಗನಾದ ಆ ಪರಾತ್ಪರನನ್ನು, ಮುಖದಲ್ಲಿ ಮಂದ ಹಾಸವುಳ್ಳವನನ್ನು, ನಾರದಾದಿ ಮುನಿಗಳ ವಂದನೆಗೆ ಪಾತ್ರನಾದ ಆ ಹರಿಯನ್ನೇ ನಾನು ಸಂತತವಾಗಿ ಚಿಂತಿಸುತ್ತೇನೆ. (೮)

ಪದ್ಮಾಕ್ಷನೂ ಸಶಂಖಚಕ್ರನೂ ಮುರಾರಿಯೂ ಆದ ಆತನಲ್ಲಿ ನನ್ನ ಚಿತ್ತ ವಿರಮಿಸುತ್ತದೆ. ಹರಿಯ ಚರಣವನ್ನು ಜ್ಞಾಪಿಸುವ ಅಮೃತದಂತಹದನ್ನು ಅದಕ್ಕಿಂತ ನೀರಿದ ಸುಖಕರವಾದದ್ದನ್ನು ನಾನು ಕಾಣೆ. (೧೦)

'ಅಗಾಧವೂ ದುಸ್ತರವೂ ಆದ ಸಂಸಾರವನ್ನು ನಾನು ಹೇಗೆ ದಾಟಬಲ್ಲೆ?' ಎಂಬ ಕಾತರ ನನಗಿಲ್ಲ. ಕಮಲನೇತ್ರನಾದ ಆ ನರಕಾಸುರನಲ್ಲಿ ನನಗಿರುವ ಭಕ್ತಿಯೊಂದೇ ನನ್ನನ್ನು ದಡಮುಟ್ಟಿಸುತ್ತದೆ. (೧೩)

ನಾರಾಯಣನಲ್ಲದೆ ಬೇರೆ ರಕ್ಷಕನನ್ನು ನಾನು ಕಾಣೆ. (೨೧)

Sri Vidyabharathi Book Centre, Sringeri

CC-O. In Public Domain. Digitized by eGangotri

ಕುಲಶೇಖರರ ಪ್ರಾರ್ಥನೆ

ಮುಕುಂದ! ನಿನ್ನ ನಾಮಾವಳಿಯನ್ನು ನಾನು ಆಡಿಗಡಿಗೂ ಹೇಳಿ ಕೊಳ್ಳುವಂತೆ ಮಾಡು. (೧)

ಮುಕುಂದ! ನಿನ್ನ ಪಾದಗಳಲ್ಲಿ ತಲೆಯಿರಿಸಿ ನಾನು ಕೇಳಿಕೊಳ್ಳುವುದು ಇಷ್ಟೆ: ನಾನು ನಿನ್ನ ಪಾದಗಳನ್ನು ಎಂದಿಗೂ ಮರೆಯದಿರುವಂತೆ ಅನುಗ್ರಹಿಸು. (೩)

ಹರಿಯೇ! ನಾನು ಬೇರೆ ಯಾವ ಭೋಗಗಳಿಗೂ ಆಸೆ ಪಡುವುದಿಲ್ಲ. ನನ್ನ ಹೃದಯದಲ್ಲಿ ಸದಾ ನಿನ್ನನ್ನೇ ಭಾವಿಸುತ್ತೇನೆ. (೪)

ಭಗವನ್! ಜನ್ಮಜನ್ಮಾಂತರಗಳಲ್ಲಿಯಾದರೂ ನಿನ್ನ ಪಾದಕಮಲಗಳಿರಡರಲ್ಲಿ ಹೋಗಿ ನಿಲ್ಲುವ ನಿಶ್ಚಲಭಕ್ತಿ ನನಗೆ ಉಂಟಾಗಲಿ. (೫)

ಹೇ ನರಕಾಂತಕ! ನಾನು ಎಲ್ಲಿದ್ದರೂ ಸರಿಯೆ, ಮರಣ ಹೊಂದುವಾಗ ಕೂಡ ನಿನ್ನ ಪಾದಗಳನ್ನೇ ನೆನೆಯುತ್ತಿರುತ್ತೇನೆ. (೬)

ಕೃಷ್ಣ! ನಿನ್ನ ಪಾದಗಳೆಂಬ ಪಂಜರದೊಳಕ್ಕೆ ನನ್ನ ಮನಸ್ಸೆಂಬ ರಾಜಹಂಸವು ಈಗಲೇ ಹೋಗಿ ಸೇರಿಕೊಳ್ಳಲಿ. ಏಕೆಂದರೆ, ಮರಣಕಾಲದಲ್ಲಿ ಕಫ ವಾತ ಪಿತ್ತಗಳಿಂದ ಗಂಟಲು ಕಟ್ಟಿಹೋಗಿ, ಸ್ಮರಣೆ ಬಾರದೆ ಇದ್ದೀತು. (೭)

ವರದ! ಸಂಸಾರದ ಮಹಾಸಮುದ್ರದಲ್ಲಿ ಸಿಕ್ಕಿಕೊಂಡಿದ್ದೇನೆ. ನಿನ್ನ ಪಾದಗಳಲ್ಲಿ ಭಕ್ತಿ ಎಂಬ ದೋಣಿಯನ್ನು ಕರುಣಿಸಿ, ನನ್ನನ್ನು ಉದ್ಧಾರಮಾಡು. (೧೪)

ಮಾಧವ! ನಿನ್ನಲ್ಲಿ ಭಕ್ತಿಯಿಲ್ಲದವರನ್ನು ನೋಡಲಾರೆ; ನಿನ್ನ ಚರಿತವನ್ನು ಹೊರತು ಬೇರೆಯದನ್ನು ಕೇಳಲಾಲೆ; ನಿನ್ನನ್ನು ಇಲ್ಲವೆಂಬವರನ್ನು ನೆನೆಯಲಾರೆ. ಈ ವಿಧವಾದ ನಿನ್ನ ಪೂಜೆಯ ಸಂಬಂಧ ನನಗೆ ಈ ಜನ್ಮದಲ್ಲಿಯೂ ಮುಂದಿನ ಜನ್ಮಗಳಲ್ಲಿಯೂ ಸ್ಥಿರವಾಗಿರಲಿ. (೧೫)

CC-O. In Public Domain. Digitized by eGangotri

ಸರಸೀರುಹಾಕ್ಷ! ಕೈಯನ್ನು ಬೊಗಸೆಮಾಡಿ ಜೋಡಿಸಿ, ತಲೆಯನ್ನು ಬಗ್ಗಿಸಿ, ಅಂಗಗಳಲ್ಲಿ ರೋಮಾಂಚವನ್ನು ಹೊಂದಿ, ಗದ್ಗದಕಂತನಾಗಿ, ಕಣ್ಣುಗಳಿಂದ ಆನಂದಬಾಷ್ಪವನ್ನು ಸುರಿಸುತ್ತಾ ನಿನ್ನ ಚರಣಾರವಿಂದಗಳ ಧ್ಯಾನವೆಂಬ ಅಮೃತವನ್ನು ಸವಿಯುತ್ತಿರುವ ನನಗೆ ಇದೇ ಭಾಗ್ಯ ಎಂದೆಂದಿಗೂ ಇರಲಿ. (೨೦)

ನಾರಾಯಣನಾದ ನಿನ್ನ ಪಾದಪದ್ಮಗಳನ್ನು ಸಂಸ್ಮರಿಸದೆ ಮಾಡಿದ ವೇದಾಭ್ಯಾಸ ವ್ಯರ್ಥ; ಮಾಡಿದ ವ್ರತಗಳು ವ್ಯರ್ಥ; ಮಾಡಿದ ತೀರ್ಥಯಾತ್ರೆ ವ್ಯರ್ಥ. ನಿನ್ನ ಪಾದಗಳನ್ನು ನೆನೆಯುವುದು ಒಂದೇ ಸಾರ್ಥ. (೨೫)

ಆದ್ದರಿಂದ, ಲೋಕನಾಥ, ನನ್ನನ್ನು ನಿನ್ನ ಭೃತ್ಯನ ಭೃತ್ಯನ ಪರಿಚಾರಕನ ಭೃತ್ಯನ ಭೃತ್ಯನ ಭೃತ್ಯನ ಭೃತ್ಯನೆಂದು ಸ್ಮರಿಸು. ನಾನು ಕೇಳಿಕೊಳ್ಳಬೇಕಾದ್ದು ಇಷ್ಟೇ, ನೀನು ನನಗೆ ಕೊಡಬೇಕಾದ್ದೂ ಇಷ್ಟೇ! (೨೭)

Sri Vidyabharathi Book Centre, Sringeri

CC-O. In Public Domain. Digitized by eGangotri

ಸರ್ವಾರ್ಪಣ

ನಾಲಗೆ ಕೇಶವನನ್ನು ಕೀರ್ತಿಸಬೇಕು ;
ಮನಸ್ಸು ಮುರರಿಪುವನ್ನು ಭಜಿಸಬೇಕು ;
ಎರಡು ಕೈಗಳೂ ಶ್ರೀಧರನನ್ನು ಚೆನ್ನಾಗಿ ಆರ್ಚಿಸಬೇಕು ;
ಎರಡು ಕಿವಿಗಳೂ ಅಚ್ಯುತನ ಕತೆಯನ್ನು ಕೇಳಬೇಕು ;
ಎರಡು ಕಣ್ಣೂ ಕೃಷ್ಣನನ್ನು ಕಾಣಬೇಕು ;
ಎರಡು ಕಾಲೂ ಹರಿಯ ಆಲಯಕ್ಕೆ ಹೋಗಬೇಕು ;
ಮೂಗು ಮುಕುಂದನ ಪಾದಗಳ ತುಲಸಿಯನ್ನು ವಾಸನೆ ನೋಡಬೇಕು ;
ಅಧೋಕ್ಷಜನಿಗೆ ತಲೆ ನಮಸ್ಕರಿಸಬೇಕು. (೧೬)

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣ ವರ್ಣನ

ನಾರಾಯಣಮೂರ್ತಿ ಕ್ಷೀರಸಾಗರದಲ್ಲಿ ಹಾವಿನ ಹೆಡೆಗಳಿರುವ ಹಾಸಿಗೆಯ ಮೇಲೆ ಮಲಗಿದ್ದಾನೆ. ಕ್ಷೀರಸಾಗರದ ಅಲೆಗಳ ತುಂತುರು ನಾರಾಯಣನ ನೀಲಿಯ ಮೈಯ ಮೇಲೆ ಬಿದ್ದು, ನಕ್ಷತ್ರಖಚಿತವಾದ ಆಕಾಶದಂತೆ ಆತ ಕಂಗೊಳಿಸುತ್ತಿದ್ದಾನೆ. (೯)

ನಾರಾಯಣನ ಎದುರಿಗೆ — ಭೂಮಿ ಒಂದು ರೇಣು, ಅಣು; ಸಮುದ್ರದ ಜಲರಾಶಿ ಒಂದು ತುಂತುರು; ಸೂರ್ಯ ಚಂದ್ರರ ತೇಜಸ್ಸು ನಿಸ್ಸಾರವೂ ಲಘುವೂ ಆದ ಕಿಡಿ; ವಾಯು ಅತ್ಯಂತ ಸೂಕ್ಷ್ಮವಾದ ನಿಶ್ವಾಸ; ಆಕಾಶ ತುಂಬ ಚಿಕ್ಕದಾದ ರಂಧ್ರ; ರುದ್ರ ಬ್ರಹ್ಮ ಮೊದಲಾದವರು ಕ್ಷುದ್ರರು; ಸಮಸ್ತ ದೇವತೆಗಳೂ ಕೀಟಗಳು. ನಾರಾಯಣನ ಮಹಿಮೆ ಹೀಗೆ ಎಲ್ಲ ಎಲ್ಲೆಯನ್ನೂ ಮೀರಿದ್ದು. (೯)

ನಾರಾಯಣನ ಪ್ರಿಯೆ ಸಮುದ್ರನ ಮಗಳು; ಆತನ ಮಗ ಬ್ರಹ್ಮ; ವೇದಗಳು ಆತನನ್ನು ಸ್ತುತಿಸುತ್ತವೆ; ದೇವತೆಗಳೆಲ್ಲ ಆತನ ಭೃತ್ಯವರ್ಗ; ಮುಕ್ತಿ ಆತನ ಪ್ರಸಾದ; ಅವಿಕಲವಾದ ಜಗತ್ತು ಆತನ ಸಂಬಂಧವಾದ ಮಾಯೆ; ದೇವಕಿ ಆತನ ತಾಯಿ; ಇಂದ್ರನ ಮಗನಾದ ಅರ್ಜುನ ಆತನ ಸ್ನೇಹಿತ. ನಾರಾಯಣ ಬೇರೆಯಲ್ಲ, ವಾಸುದೇವನಾದ ಕೃಷ್ಣ ಬೇರೆಯಲ್ಲ. (೩೨)

Sri Vidyabharathi Book Centre, Sringeri

CC-O. In Public Domain. Digitized by eGangotri

ನಾರಾಯಣ: ಸರಸ್ಸು

ನಾರಾಯಣ ಒಂದು ಸರೋವರ. ಅಲ್ಲಿ ಆತನ ತೇಜಸ್ಸೇ ನೀರು; ಕೈಕಾಲುಗಳೇ ಕಮಲ; ಆತನ ಭುಜಗಳೇ ಅಲೆಗಳು; ಕಣ್ಣುಗಳೇ ಮೀನುಗಳು. ಸಂಸಾರದ ಮರುಭೂಮಿಯಲ್ಲಿ ಖೇದಗೊಂಡವರು ಈ ಸರೋವರದ ನೀರಿನಿಂದ ಆಯಾಸಪರಿಹಾರ ಮಾಡಿಕೊಳ್ಳಬಹುದು. (೯)

ನಾರಾಯಣ: ದೋಣಿ

ನಾರಾಯಣ ಒಂದು ದೋಣಿ. ಸಂಸಾರಸಮುದ್ರದಲ್ಲಿ ಸಿಕ್ಕಿಕೊಂಡು, ಅಲ್ಲಿಂದ ಪಾರಾಗಲಾರದೆ ಪಾಡುಪಡುತ್ತಿರುವವರನ್ನು ಈ ದೋಣಿ ಉದ್ಧಾರ ಮಾಡುತ್ತದೆ. (೧೨)

ಸಂಸಾರಸಾಗರದಲ್ಲಿ ಮುಳುಗಿಹೋಗುತ್ತಿರುವವನನ್ನು ಉದ್ಧಾರ ಮಾಡಲು ಅರ್ಹನಾದವನು ಎಂದರೆ–ಭಗವಂತನೂ ವಿಷ್ಣುವೂ ಅನಂತನೂ ಹರಿಯೂ ಎನ್ನಿಸಿದ ಪುರುಷೋತ್ತಮನಾದ ಮುಕುಂದನೇ. (೩೪)

Sri Vidyabharathi Book Centre, Sringeri

CC-O. In Public Domain. Digitized by eGangotri

'ಮುಕುಂದಮಾಲಾ' ಏನು ಹೇಳುತ್ತದೆ?

ನಾರಾಯಣನು ಭಕ್ತಿಗೆ ಸುಲಭವಾಗಿ ದೊರಕುತ್ತಾನೆ. ಆದ್ದರಿಂದ ಆಲಸ್ಯವನ್ನು ತೊರೆದು ಆತನನ್ನು ಧ್ಯಾನಿಸು. ಆತ ನಮಗೆ ಸ್ವಾಮಿಯಾಗಿರುವಾಗ, ಯಮನಿಂದ ಆಗುವ ಯಾತನೆಗಳನ್ನು ಕುರಿತು ನಾವು ಮಂದ ಬುದ್ಧಿಗಳಾಗಿ ಚಿಂತಿಸಬೇಕಾದ್ದಿಲ್ಲ. ಪಾಪಗಳು ನಮ್ಮನ್ನು ಏನೂ ಮಾಡಲಾರವು. ಲೋಕದ ವ್ಯಥೆಯನ್ನು ಕಳೆಯುವ ಆತ ನಮ್ಮ ವ್ಯಥೆಯನ್ನು ಕಳೆಯಲು ಸಮರ್ಥನಾಗನೆ? (೧೧)

ಆದ್ದರಿಂದ, 'ನಮೋ ನಾರಾಯಣಾಯ' ಎಂಬ ಮಂತ್ರವನ್ನು ಓಂಕಾರ ಸಹಿತವಾಗಿ ಪ್ರಣಾಮಮೊಡನೆ ಬಾರಿಬಾರಿಗೂ ಮನಸ್ಸಿನಲ್ಲಿ ಚೆನ್ನಾಗಿ ತಿರುವಿಹಾಕಿ. ಇದರಿಂದ, ಸಂಸಾರಸಮುದ್ರದಲ್ಲಿ ಸಿಕ್ಕಿರುವ ನಿಮಗೆ ಆಪತ್ತುಗಳೆಂಬ ಅಲೆಗಳ ತೊಂದರೆ ತಪ್ಪಿ, ಪರಮವಾದ ಹಿತವಾಗುತ್ತದೆ. (೧೮)

'ನಾರಾಯಣ' ಎಂಬ ಶ್ರೀಮಂತವಾದ ಹೆಸರನ್ನು ಹೇಳಿದರೆ, ಎಂಥ ಪಾಪಿಗಳಿಗಾದರೂ ಅವರ ಇಷ್ಟಾರ್ಥ ಕೈಗೂಡುತ್ತದೆ. ಆತನ ಹೆಸರು ಹೇಳದವರಿಗೆ ಪುನರ್ಜನ್ಮ ತಪ್ಪಿದ್ದಲ್ಲ. (೨೬)

ಆದ್ದರಿಂದ, ನಾರಾಯಣಪರವಾದ ನಾಮಾವಳಿಯನ್ನು ನಾಲಿಗೆ ಪುನಶ್ಚರಣ ಮಾಡಬೇಕು. ಅದು ಅತ್ಯುತ್ತಮವಾದ ತತ್ತ್ವಗಳನ್ನು ತಿಳಿಸುತ್ತದೆ; ಮಧುವನ್ನು ಸುರಿಸುವ ಅದು ಸತ್ಪುರುಷರಿಗೆ ಫಲ ಕೊಡುತ್ತದೆ. (೩೦)

ಆ ನಾಮಾವಳಿಯಲ್ಲಿ 'ಕೃಷ್ಣ' ಎಂಬುದು ಇವರಿಗೆ ಪ್ರಿಯವಾದದ್ದು. ಆದ್ದರಿಂದಲೇ, ಮೂರು ಲೋಕಗಳಿಗೂ ಗುರುವಾದ ಕೃಷ್ಣನು ನಮ್ಮನ್ನು ರಕ್ಷಿಸಲಿ; ನಾನು ಕೃಷ್ಣನನ್ನು ನಮಸ್ಕರಿಸುತ್ತೇನೆ; ಕೃಷ್ಣನಿಂದ ದೇವತೆಗಳ ಶತ್ರುಗಳಾದ ರಾಕ್ಷಸರು ಹತರಾದರು; ಅಂತಹ ಕೃಷ್ಣನಿಗೆ ನಮಸ್ಕಾರ; ಈ ಜಗತ್ತು ಕೃಷ್ಣನ ದೆಸೆಯಿಂದಲೆ ಉದಯಿಸಿತು. ನಾನು ಕೃಷ್ಣನ ದಾಸನಾಗಿದ್ದೇನೆ; ಈ ಸರ್ವವೂ ಅಖಿಲವೂ ಕೃಷ್ಣನಲ್ಲಿ ನೆಲಸಿ

CC-O. In Public Domain. Digitized by eGangotri. Bhavan's Vidyabharathi Book Centre, Bangalore

CC-O. In Public Domain. Digitized by eGangotri

ನಿಂತಿದೆ. ಎಲೈ ಕೃಷ್ಣನೇ, ನನ್ನನ್ನು ರಕ್ಷಿಸು, ಎಂದು ಕೃಷ್ಣನನ್ನು ಎಲ್ಲ ವಿಭಕ್ತಿಗಳಿದಂಲೂ ಪ್ರಾರ್ಥಿಸುತ್ತಾರೆ. (೩೩)

ಅಂತೆಯೇ 'ನಾರಾಯಣನ ಪಾದಕಮಲಕ್ಕೆ ನಮಸ್ಕರಿಸುತ್ತೇನೆ; ನಾರಾಯಣನ ಪೂಜೆಯನ್ನು ಮಾಡುತ್ತೇನೆ; ನಿರ್ಮಲವಾದ ನಾರಾಯಣ ನಾಮವನ್ನು ಹೇಳುತ್ತೇನೆ; ಅವ್ಯಯವಾದ ನಾರಾಯಣತತ್ತ್ವವನ್ನು ಸ್ಮರಿಸುತ್ತೇನೆ—ಎಂದು ಸರ್ವಾರ್ಪಣವನ್ನು ಹೇಳಿಕೊಳ್ಳುತ್ತಾರೆ. (೩೫)

ನಾರಾಯಣನ ನಾಮಗಳನ್ನು ಹೇಳುವ ಸಾಮರ್ಥ್ಯವಿದ್ದರೂ ಜನರು ಹೇಳುವುದಿಲ್ಲವಲ್ಲ! ವ್ಯಸನಗಳ ಕಡೆಗೇ ಮುಖ ತಿರುಗಿಸಿರುವರಲ್ಲ! ಎಂದು ಆಶ್ಚರ್ಯಪಡುತ್ತಾರೆ. (೩೭)

ನಮ್ಮ ಎಲ್ಲಾ ಇಷ್ಟಾರ್ಥಗಳನ್ನೂ ಈಡೇರಿಸಿ, ನಮಗೆ ತನ್ನನ್ನೇ ತಾನು ಕೊಟ್ಟುಕೊಳ್ಳುವ ನಮ್ಮ ನಾರಾಯಣ ಇರುವಾಗ—ಬೇರೆ ಯಾರೋ ಅಲ್ಪರ ಹತ್ತಿರ ಹೋಗಿ ಬೇಡುತ್ತೇವೆಯಲ್ಲಾ! ನಮಗೆ ಯಾರಿಂದ ಲಾಭ ಎಂಬುದನ್ನು ಅರಿಯದ ಮೂಢರು ನಾವು. (೩೮)

ನಾರಾಯಣನ ನಾಮಸ್ಮರಣೆಯಿಂದ, ಮನಸ್ಸಿನಲ್ಲಿರುವ ಕಾಮಗಳು ಎಲ್ಲವೂ ನಾಶವಾಗಿಹೋಗುತ್ತವೆ. (೩೯)

CC-O. In Public Domain. Digitized by eGangotri

ನಾರಾಯಣ ನಾಮಮಾಲೆ

ಶ್ರೀವಲ್ಲಭ—ಲಕ್ಷ್ಮಿಗೆ ಸ್ವಾಮಿಯಾದವ.
ವರದ—ಇಷ್ಟಾರ್ಥಗಳನ್ನು ಕೊಡುವವ.
ದಯಾಪರ—ದಯಾಳು.
ಭಕ್ತಪ್ರಿಯ—ಭಕ್ತರಲ್ಲಿ ಪ್ರೀತಿಯುಳ್ಳವ; ಭಕ್ತರ ಪ್ರೀತಿಗೆ ಪಾತ್ರನಾದವ.
ಭವಲುಂಠನಕೋವಿದ—ಸಂಸಾರವನ್ನು ನಾಶಮಾಡುವ ಉಪಾಯವನ್ನು ಬಲ್ಲವ.
ನಾಥ—ಸ್ವಾಮಿ.
ನಾಗಶಯನ—ಶೇಷನ ಮೇಲೆ ಮಲಗಿದವ.
ಜಗನ್ನಿವಾಸ—ಲೋಕವೇ ತನ್ನ ಮನೆಯಾದವ.
ಮುಕುಂದ—ಮುಕ್ತಿಯನ್ನು ಕೊಡುವವ.
ದೇವ—ಪ್ರಕಾಶಮಾನನಾದವ.
ದೇವಕೀನಂದನ—ದೇವಕಿಯ ಮಗ.
ಕೃಷ್ಣ—ಕಪ್ಪಾದವ.
ವೃಷ್ಣಿವಂಶಪ್ರದೀಪ—ವೃಷ್ಣಿಗಳ ವಂಶಕ್ಕೆ ಬೆಳಕಾದವ.
ಮೇಘಶ್ಯಾಮಲ—ಮೇಘದಂತೆ ಹಿತವಾದ ನೀಲಿಯ ಬಣ್ಣದವ.
ಕೋಮಲಾಂಗ—ಸುಕುಮಾರವಾದ ಮೈಯುಳ್ಳವ.
ಪೃಥ್ವೀಭಾರನಾಶ—ಭೂಮಿಯ ಭಾರವನ್ನು ನಾಶಮಾಡುವವ.
ಭಗವನ್—ಯಾರಿಂದ ಎಲ್ಲ ಭಾಗ್ಯಗಳೂ ಬರುತ್ತವೋ ಆತ.
ನರಕಾಂತಕ—ನರಕಾಸುರನನ್ನು ಕೊನೆಗಾಣಿಸಿದವನು.
ಹರಿ—ದುಃಖಗಳನ್ನೆಲ್ಲ ಹೋಗಲಾಡಿಸುವವ.
ನಂದಗೋಪತನಯ—ನಂದಗೋಪಾಲನ ಮಗ.
ಪರಾತ್ಪರ—ದೊಡ್ಡದಕ್ಕಿಂತ ದೊಡ್ಡವ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸರಸಿಜನಯನ—ತಾವರೆಯಂತೆ ಕಣ್ಣುಳ್ಳವ.
ಪದ್ಮಾಕ್ಷ—ಕಮಲದಂತೆ ಕಣ್ಣುಳ್ಳವ.
ಸಶಂಖಚಕ್ರ—ಶಂಕ ಚಕ್ರಗಳನ್ನು ಉಳ್ಳವ.
ಮುರಭಿದ್—ಮುರನೆಂಬ ರಾಕ್ಷಸನನ್ನು ಮುರಿದವ.
ಮುರರಿಪು—ಯಾರಿಗೆ ಮುರಾಸುರನು ಶತ್ರುವೋ ಆತ.
ಮುರಾರಿ—ಮುರರಿಪು.
ಶ್ರೀಧರ—ಲಕ್ಷ್ಮಿಯನ್ನು ವಕ್ಷಃಸ್ಥಲದಲ್ಲಿ ಧರಿಸಿದವ.
ನಾರಾಯಣ—ಎಲ್ಲ ನರರಿಗೂ ಆಶ್ರಯನಾದವನು.
ವಿಷ್ಣು—ಎಲ್ಲ ಕಡೆಯೂ ವ್ಯಾಪಿಸಿಕೊಂಡಿರುವವ.
ನರಕಭಿದ್—ನರಕಾಸುರನನ್ನು ಮುರಿದವ.
ಮಾಧವ—ಮಾ–ಲಕ್ಷ್ಮಿಗೆ ಧವ–ಪತಿಯಾದವ.
ಕೇಶವ—ಸುಂದರವಾದ ಕೇಶಗಳುಳ್ಳವ.
ಅಚ್ಯುತ—ಕೊನೆಯಿಲ್ಲದವ, ಅನಂತ.
ಅಧೋಕ್ಷಜ—ಸ್ವರ್ಗಲೋಕ ಮತ್ತು ಭೂಲೋಕ–ಇವುಗಳ ಮಧ್ಯದಲ್ಲಿ ಹುಟ್ಟಿದವನು.
ಗೋಪಾಲಕ—ಹಸುಗಳನ್ನು ಕಾಯುವವನು.
ಕೃಪಾಜಲನಿಧಿ—ಕೃಪಾಸಮುದ್ರ.
ಸಿಂಧುಕನ್ಯಾಪತಿ—ಸಮುದ್ರನ ಮಗಳಾದ ಲಕ್ಷ್ಮಿಗೆ ಪತಿ.
ಕಂಸಾಂತಕ—ಕಂಸನನ್ನು ಕೊಂದವ.
ಗಜೇಂದ್ರಕರುಣಾಪಾರೀಣ—ಗಜೇಂದ್ರನನ್ನು ಕರುಣೆಯಿಂದ ಕಾಪಾಡಿದವ.
ರಾಮಾನುಜ—ಬಲರಾಮನ ತಮ್ಮ.
ಜಗತ್ತ್ರಯಗುರು—ಮೂರು ಲೋಕಗಳಿಗೂ ಹಿರಿಯ.
ಪುಂಡರೀಕಾಕ್ಷ—ಬಿಳಿಯ ತಾವರೆಯಂತೆ ಕಣ್ಣುಳ್ಳವ.
ಗೋಪೀಜನನಾಥ—ಗೋಪಿಯರ ಸಮೂಹಕ್ಕೆ ಸ್ವಾಮಿ.
ಗೋಪಾಲಚೂಡಾಮಣಿ—ಗೊಲ್ಲರ ಮುಖಂಡ.
ಮಧುಕೈಟಭಾರಿ—ಮಧುಕೈಟಭರ ಶತ್ರು.
ಲೋಕನಾಥ—ಲೋಕಗಳಿಗೆ ಒಡೆಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುರುಷೋತ್ತಮ—ಪುರುಷರಲ್ಲೆಲ್ಲ ಉತ್ತಮನಾದವ.
ಶ್ರೀನಾಥ—ಲಕ್ಷ್ಮೀಪತಿ.
ವಾಸುದೇವ—ವಾಸುದೇವನ ಮಗ.
ಚಕ್ರಪಾಣಿ—ಕೈಯಲ್ಲಿ ಚಕ್ರ ಹಿಡಿದವ.
ಪದ್ಮನಾಭ—ಹೊಕ್ಕುಳಲ್ಲಿ ಪದ್ಮವನ್ನು ಉಳ್ಳವ.
ಶ್ರೀರಾಮ—ತ್ರೇತಾಯುಗದಲ್ಲಿ ರಾಮನಾಗಿ ಅವತರಿಸಿದ್ದ ಕೃಷ್ಣ.
ಅನಂತ—ಕೊನೆಯಿಲ್ಲದವ, ಅಚ್ಯುತ.
ವೈಕುಂಠ—ಯಾವ ಅಡ್ಡಿಯೂ ಇಲ್ಲದವ.
ಗೋವಿಂದ—ಗೋವುಗಳಿಗೆ ಏನು ಬೇಕೆಂದು ಬಲ್ಲವ.
ದಾಮೋದರ—ಹೊಟ್ಟೆಗೆ ಹಗ್ಗವನ್ನು ಬಿಗಿಸಿಕೊಂಡವ

'ಮುಕುಂದಮಾಲಾ' ಒಂದು ಸಣ್ಣ 'ಸಹಸ್ರನಾಮ' ಇದ್ದ ಹಾಗೆ ಇದೆ. ಇದರೊಳಗೆ ಬರುವ ಹೆಸರುಗಳೆಲ್ಲ 'ನಾರಾಯಣ' ಪರವಾದವು. ಆದಕಾರಣ ಪ್ರತಿಯೊಂದು ಹೆಸರೂ ಸಮಾನವಾದ ಪ್ರೀತಿ ಗೌರವಗಳಿಗೆ ಪಾತ್ರವಾದುದಾದರೂ ಕೆಲವು ಹೆಸರುಗಳು ಹೇಳುವವರಿಗೆ ಹೆಚ್ಚು ಪ್ರಿಯವಾದರೆ ಏನೂ ತಪ್ಪಲ್ಲ.

ಉದಾಹರಣೆಗೆ 'ಮುಕುಂದಮಾಲೆ' ಯಲ್ಲಿ—
ನಾರಾಯಣ ಎಂಬುದು ೧೧ ಸಲ,
ಹರಿ ಏಳು ಸಲ,
ಮುಕುಂದ ಆರು ಸಲ,
ಪದ್ಮಾಕ್ಷ ಐದು ಸಲ,
ಮುರರಿಪು, ಮಾಧವ ನಾಲ್ಕು ಸಲ,
ವಿಷ್ಣು, ಮಧುಕೈಟಭಾರಿ ಮೂರು ಸಲ,
ವರದ, ಭಕ್ತಪ್ರಿಯ, ದೇವ, ಭಗವನ್, ಶ್ರೀಧರ, ಅಚ್ಯುತ, ಪುರುಷೋತ್ತಮ, ಅನಂತ ಇವು ಎರಡೆರಡು ಸಲ ಬಂದರೆ—
ಕೃಷ್ಣ ಒಂದು ಹೊರತಾಗಿ ಮಿಕ್ಕೆಲ್ಲ ಒಂದು ಸಲ ಮಾತ್ರ ಬರುತ್ತವೆ.
ಕೃಷ್ಣ ಮಾತ್ರ ೪೦ ಪದ್ಯಗಳಲ್ಲಿ ೧೭ ಸಲ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷ್ಣ : ಮಣಿ-ಮಂತ್ರ-ಔಷಧ

ಕೃಷ್ಣನು-ಭಕ್ತರ ಅಪಾಯಗಳೆಂಬ ಸರ್ಪಕ್ಕೆ ಗರುಡಮಣಿ ; ಮೂರು ಲೋಕಗಳ ರಕ್ಷಾಮಣಿ ; ಗೋಪಿಯರ ಕಣ್ಣುಗಳೆಂಬ ಚಾತಕಕ್ಕೆ ಮೇಘ ಮಣಿ ; ಸೌಂದರ್ಯಮುದ್ರಾಮಣಿ ; ರುಕ್ಮಿಣಿಯ ಎದೆಗೆ ಏಕ ಭೂಷಾ ಮಣಿ . ದೇವಶಿಖಾಮಣಿಯಾದ ಈತ ಗೋಪಾಲಚೂಡಾಮಣಿಯೂ ಹೌದು (೨೨)

ಕೃಷ್ಣಮಂತ್ರ ಜನ್ಮವನ್ನು ಸಫಲಮಾಡುವ ಮಂತ್ರ. ನಾಲಗೆ ಅದನ್ನು ಮತ್ತೆ ಮತ್ತೆ ಜಪಿಸಬೇಕು. (೨೩)

ಕೃಷ್ಣನ ಹೆಸರು ಒಂದು ದಿವ್ಯವಾದ ಔಷಧ. ಮನಸ್ಸು ಅದನ್ನು ಕುಡಿದರೆ ಶ್ರೇಯಸ್ಸು ಉಂಟಾಗುತ್ತದೆ. (೨೪)

ಕೃಷ್ಣನ ಹೆಸರೇ ಒಂದು ರಸಾಯನ. ಗಳಿತವಾಗುವ ದೇಹಕ್ಕೆ, ಸಡಿಲವಾಗುವ ಕೀಲುಗಳಿಗೆ ಯಾವಯಾವುದೋ ಔಷಧ ಸೇವಿಸುವ ಬದಲು, ರೋಗಗಳೇ ಇಲ್ಲದಂತೆ ಮಾಡುವ ಕೃಷ್ಣರಸಾಯನವನ್ನು ಕುಡಿ. (೩೧)

Sri Vidyabharathi Book Centre, Sringeri

CC-O. In Public Domain. Digitized by eGangotri

ಫಲಶ್ರುತಿ

'ಹೃದಯದೊಳಗೆ ಜ್ಯೋತಿಯಾಗಿದ್ದು, ಅನೇಯವೂ ಅದ್ವಿತೀಯವೂ ಆದ 'ಕೃಷ್ಣ' ಎಂಬ ಹೆಸರಿನ ಅಮೃತವಿದೆ. ಜನನ ಮರಣಗಳೆಂಬ ವ್ಯಾಧಿಗೆ ಇದರಿಂದ ಚಿಕಿತ್ಸೆಯಾಗುತ್ತದೆ' ಎಂದು ಯೋಗವನ್ನು ತಿಳಿದ ಯಾಜ್ಞವಲ್ಕ್ಯ ಮೊದಲಾದವರು ಹೇಳುತ್ತಾರೆ. ಈ ಪರಮೌಷಧವನ್ನು ಕುಡಿದರೆ ಆತ್ಯಂತಿಕವಾದ ನಿರ್ವಾಣಸುಖವುಂಟಾಗುತ್ತದೆ. (೧೭)

ನಾರಾಯಣನು ಅನಂತನು, ಹೃದಯಪದ್ಮದ ಮಧ್ಯದಲ್ಲಿ ಸಂತತವಾಗಿ ನೆಲಸಿರುವವನು, ಸ್ಥಿರವಾದ ಚಿತ್ತವುಳ್ಳವರಿಗೆ ಅಭಯವನ್ನು ಕೊಡುವವನು ಇಂಥವನನ್ನು ಧ್ಯಾನಮಾಡುವವರು ಅತ್ಯುತ್ತಮವಾದ ವೈಷ್ಣವಸಿದ್ಧಿಯನ್ನು ಪಡೆಯುತ್ತಾರೆ. (೩೮)

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಎನ್. ಜಿ. ಲಕ್ಷ್ಮೀನರಸಿಂಹ ಅಯ್ಯಂಗಾರ್ ಸ್ಮಾರಕ ಪುಸ್ತಕ ಮಾಲೆ

1. ಮುಕುಂದಮಾಲಾ
2. ಶ್ರೀ ರಾಮನಾಮ
3. ಕಸ್ತೂರೀತಿಲಕಂ
4. ಜಯಮಂಗಳಂ
5. ಪ್ರಾಣೇಶ್ವರ ಪ್ರಾಪ್ತಿ
6. ಶ್ರೀ ವಿಷ್ಣುಚಿತ್ತ
7. ತಿರುಪ್ಪಾವೈ
8. ಶ್ರೀಕೃಷ್ಣ ಸೇವಾವ್ರತಂ
9. ಮಾಧವಪದಮಾಧುರ್ಯ
10. ಶ್ರೀ ಸಾಯಿ ಚಿಂತನ
11. ಶ್ರೀ ಸಾಯಿ ಸರಸ್ವತಿ
12. ಮಾಣಿಕ್ಯಂ ಗಟ್ಟ
13. ಬೆಳಕಿನ ದಾರಿ
14. ಮಾನ – ಮರ್ಯಾದೆ
15. ಮಹಾತ್ಮರ ಮರಣ
16. ಗಾಂಧೀ ಗಾಯತ್ರಿ
17. ಗಾಂಧೀ ರಾಜ್ಯಭಾರ
18. ಪುಟಾಣಿ ಪ್ರಾರ್ಥನೆಗಳು

ಸಂಪಾದಕ : ಜಿ. ಪಿ. ರಾಜರತ್ನಂ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಚಿಕದೇವರಾಜ ಬಿನ್ನಪ

ಮೈಸೂರು ದೇಶವನ್ನು (1672-1704) ಆಳಿದ
ಶ್ರೀ ಚಿಕದೇವರಾಜ ಒಡೆಯರು
ತಮ್ಮ ಕುಲದೇವತೆಯಾದ
ಮೇಲುಕೋಟೆಯ ಚೆಲುವನಾರಾಯಣಸ್ವಾಮಿಯ
ಶ್ರೀಪಾದಗಳಲ್ಲಿ ಸಮರ್ಪಿಸಿದ ಮೂವತ್ತು ಬಿನ್ನಹಗಳು.

ಹದಿನೇಳನೆಯ ಶತಮಾನದ ಹಳಗನ್ನಡ ಮೂಲಕ್ಕೆ
ಇಪ್ಪತ್ತನೆಯ ಶತಮಾನದ ಹೊಸಗನ್ನಡ ಅನುವಾದ.

ವಿಶಿಷ್ಟಾದ್ವೈತವೆಂಬ ಶ್ರೀವೈಷ್ಣವ ಸಿದ್ಧಾಂತಕ್ಕೆ
ಅತ್ಯಂತ ಸರಳವೂ ಸುಂದರವೂ ಆದ ಕೈಪಿಡಿ.

ಈಶ್ವರ — ಜೀವ — ಜಡ
ಎಂಬ ಮೂರು ತತ್ತ್ವಗಳ ಸ್ವರೂಪವನ್ನೂ
ಸಂಸಾರ — ಮುಕ್ತಿ — ಮುಕ್ತಿಗೆ ಉಪಾಯ
ಎಂದು ಮೂರು ಮುಖ್ಯ ವಿಷಯಗಳನ್ನೂ
ಈ ಬಿನ್ನಪದಲ್ಲಿ ಕಾಣಬಹುದು.

ಚಿಕದೇವರಾಜ ಒಡೆಯರ ಸರಸಗುಣಕ್ಕೂ
ವೇದಾಂತ ತತ್ತ್ವಗಳು ಸಾಹಿತ್ಯವಾಗಬಲ್ಲುದಕ್ಕೂ
ಹಳಗನ್ನಡ ಗದ್ಯದ ಸುಲಲಿತವಾದ ಮೃದುಬಂಧಕ್ಕೂ
ಶ್ರೀ ಚಿಕದೇವರಾಜ ಬಿನ್ನಪವು ಉತ್ತಮವಾದ ಉದಾಹರಣೆ.

Sri Vidyabharathi Book Centre, Sringeri